SC. 1319/2024
PW-13, CW-41

SC. 1319/2024
PW-13, CW-41

**ದಿನಾಂಕಃ15.06.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಪ್ರಾಜ್ಞ ವಿಶೇಷ ಪಿಪಿ ರವರಿಂದಃ**

7. ಆ ದಿನ ನಾವು ಸದರಿ ಸ್ಥಳಕ್ಕೆ ಮಹಜರ್ ಗೆ ಹೋದಾಗ, ಪುನೀತ್ ತಮಗೆ ಏನೇನು ತಿಳಿಸಿದ್ದ ಎಂದು ನಮಗೆ ಈ ಕೆಳಗಿನಂತೆ ಹೇಳಿರುತ್ತಾನೆಃ

"ಪವನ್, ಪುನೀತ್‌ಗೆ ಕರೆ ಮಾಡಿ ಲೊಕೇಷನ್ ಕಳುಹಿಸಲು ಕೇಳಿದ್ದು, ಆದರೆ ಪುನೀತ್ ತನಗೆ ಲೊಕೇಷನ್ ಕಳುಹಿಸಲು ಬರುವುದಿಲ್ಲ, ಆದರೆ ರಾಜು ಎಂಬುವವರ ಮೊಬೈಲ್‌ನಿಂದ ಲೊಕೇಷನ್ ಕಳುಹಿಸುವುದಾಗಿ ಹೇಳಿದ್ದನು. ಆದಾದ 20 ನಿಮಿಷಗಳ ನಂತರ ಒಂದು ವಾಹನ ಬಂದಿದ್ದು ಅದರಲ್ಲಿ ನಾಲ್ಕು ಜನ ಇದ್ದರು. ಪವನ್ ಮತ್ತೆ ಪುನೀತ್‌ಗೆ ಕರೆ ಮಾಡಿ ಯಾವುದಾದರ ವಾಹನ ಬಂದಿತ್ತ ಎಂದು ಕೇಳಿದ್ದಕ್ಕೆ ಆಗ ತಾನು  ಬಂದಿದೆ ಎಂದು ಹೇಳಿದ್ದೆ. ಅದಾದ ಅರ್ಧಗಂಟೆಗಳ ನಂತರ ಪವನ್, ನಂದೀಶ್ ಮತ್ತು ಇನ್ನೊಬ್ಬ ವ್ಯಕ್ತಿ ಶೆಡ್ಡೆ ಬಂದಿದ್ದು, ನಂತರ ಶೆಡ್‌ಗೆ ಬಂದವರು ಎಲ್ಲಿದ್ದಾನೆ ಎಂದು ಕೇಳಿದಾಗ, ಆ ಮರದ ಬಳಿ ಇದ್ದಾರೆ ಎಂದು ಪುನೀತ್ ತಿಳಿಸಿದ್ದನು. ನಂತರ ವಾಹನದಲ್ಲಿ ಬಂದಿದ್ದವರು ಮತ್ತು ಮೊದಲು ಬಂದಿದ್ದವರು ಸೇರಿ ಒಬ್ಬ ವ್ಯಕ್ತಿಯನ್ನು ಹೊಡೆದಿದ್ದರು. ಆಗ ಪುನೀತ್ ಹೋಗಿ ಸದರಿ ವ್ಯಕ್ತಿಗಳನ್ನು ಏಕೆ ಈ ವ್ಯಕ್ತಿಗೆ ಹೊಡೆಯುತ್ತಿದ್ದೀರ ಎಂದು ಕೇಳಿದ್ದಕ್ಕೆ  ಈತನೇ ಪವಿತ್ರಗೌಡರವರಿಗೆ ಅಶ್ಲೀಲವಾದ ಮೆಸೇಜ್ ಕಳುಹಿಸಿದ್ದ ವ್ಯಕ್ತಿಯಾಗಿದ್ದಾನೆ, ಆತನ ಹೆಸರು ರೇಣುಕ ಎಂದು ಹೇಳಿದ್ದನು. ಆನಂತರ ರೇಣುಕಾಸ್ವಾಮಿಯನ್ನು ಹೊಡೆದ ನಂತರ ಆತ ಮಲಗಿಕೊಂಡಿದ್ದಾಗ, ಉಳಿದವರೆಲ್ಲರೂ ಸೇರಿ ಊಟಕ್ಕೆ ಹೋದರು.

ನಂತರ ವಿನಯ್ ಎಂಬುವವರು ಪುನೀತ್‌ಗೆ ಕರೆ ಮಾಡಿ ಯಾರಾದರು

ವಾಹನದಲ್ಲಿ ಅಲ್ಲಿಗೆ ಬಂದಿದ್ದಾರ ಎಂದು ವಿಚಾರಿಸಿದನು. ಅದಕ್ಕೆ ಪುನೀತ್ ಯಾರೋ ನಾಲ್ಕು ಜನ ವಾಹನದಲ್ಲಿ ಬಂದಿದ್ದಾರೆ, ಅವರು ಒಬ್ಬ ವ್ಯಕ್ತಿಗೆ ಹೊಡೆದು ಮಲಗಿಸಿ ಅವರು ಊಟಕ್ಕೆ ಹೋಗಿದ್ದಾರೆ ಎಂದು ಹೇಳಿದನು. ಯಾವ ವ್ಯಕ್ತಿಗೆ ಹೊಡೆದಿದ್ದಾರೆ, ಆತನ ಫೋಟೋವನ್ನು ಮೊಬೈಲ್‌ನಲ್ಲಿ ತೆಗೆದು ಕಳುಹಿಸಲು ವಿನಯ್ ಕೇಳಿದ್ದನು. ಅದಕ್ಕೆ ಪುನೀತ್ ಆ ವ್ಯಕ್ತಿಯ ಫೋಟೋ ತೆಗೆದು ಕಳುಹಿಸಿರುತ್ತಾನೆ.

ಇದಾದ ಸುಮಾರು ಅರ್ಧ ಗಂಟೆ ನಂತರ ಸದರಿ ಸ್ಥಳಕ್ಕೆ ವಿನಯ್, ದರ್ಶನ್, ಪವಿತ್ರಗೌಡ ಮತ್ತು ಪ್ರದೂಷ್ ಒಂದು ಕಾರಿನಲ್ಲಿ ಹಾಗೂ ಇನ್ನೊಂದು ಕಾರಿನಲ್ಲಿ ನಾಗರಾಜ್ ಎಂಬುವವರು ಬಂದಿರುತ್ತಾರೆ. ಅವರೆಲ್ಲರೂ ಸೇರಿ ರೇಣುಕಾಸ್ವಾಮಿಗೆ ಹಲ್ಲೆ ಮಾಡಿ, ಸದರಿ ವ್ಯಕ್ತಿಯನ್ನು ಅಲ್ಲೆ ಬಿಟ್ಟು ಹೋದರು. ಸದರಿ ಸ್ಥಳಕ್ಕೆ ಮೊದಲ ವಾಹನದಲ್ಲಿ ಚಿತ್ರದುರ್ಗದಿಂದ ಬಂದ ವ್ಯಕ್ತಿಗಳು ದರ್ಶನ್ ಜೊತೆಗೆ ಫೋಟೋ ತೆಗೆಸಿಕೊಳ್ಳಬೇಕು ಎಂದು ಕೇಳಿದ್ದರು, ಅದಕ್ಕೆ ಪುನೀತ್‌ರವರು ಅವರೆಲ್ಲರ ಫೋಟೋಗಳನ್ನು ತೆಗೆದಿರುತ್ತಾನೆ. ನಂತರ ಅವರೆಲ್ಲರೂ ಹೊರಟು ಹೋಗಿರುತ್ತಾರೆ. ನಂತರ ಪುನೀತ್ ಮಹದೇಶ್ವರ ಬೆಟ್ಟಕ್ಕೆ ಹೋಗಿರುತ್ತಾರೆ.

ಪುನೀತ್ ಮಹದೇಶ್ವರ ಬೆಟ್ಟದಿಂದ ಕೆಲಸಕ್ಕೆ ಬಂದಾಗ, ವಿನಯ್‌ರವರಿಗೆ ಮೊನ್ನೆ ಮೊಬೈಲ್ನಿಂದ ಕಳುಹಿಸಿದ್ದ ಆ ವ್ಯಕ್ತಿಯ ಫೋಟೋ ಎಲ್ಲಿದೆ ಎಂದು ತೋರಿಸಲು ಕೇಳಿದನು, ಆತನ ತನ್ನ ಮೊಬೈಲ್‌ನಲ್ಲಿ ಇರುವ ಫೋಟೋವನ್ನು ತೋರಿಸಿದಾಗ, ವಿನಯ್ ಸದರಿ ಫೋಟೋವನ್ನು ಡಿಲೀಟ್ ಮಾಡಿರುತ್ತಾರೆ".

8. ಇಷ್ಟನ್ನು ಪುನೀತ್ ಹೇಳಿದ ನಂತರ ಪುನೀತ್‌ಗೆ ಯಾವ ಸ್ಥಳದಲ್ಲಿ ಆ ವ್ಯಕ್ತಿಯನ್ನು ಹೊಡೆದು ಮಲಗಿಸಿದರು ಎಂದು ಪೊಲೀಸರು ಹಾಗೂ ನಾವು

ಕೇಳಿದಾಗ, 200 ಮೀಟರ್ ದೂರದಲ್ಲಿ ಒಂದು ಲಾರಿ ಇದೆ, ಅಲ್ಲಿ ಆ ಸ್ಥಳ ಇದೆ ಎಂದು ಹೇಳಿ ಅಲ್ಲಿಗೆ ಕರೆದುಕೊಂಡು ಹೋಗುತ್ತಾನೆ.

9. ಆ ಸ್ಥಳದಲ್ಲಿ ಪೊಲೀಸರು ರಂಗೋಲಿಯಿಂದ ಸ್ಥಳವನ್ನು ಗುರುತಿಸಿರುತ್ತಾರೆ. ಸದರಿ ಸ್ಥಳದಲ್ಲಿ ಒಂದು ಲಾರಿ ಇದ್ದು, ಅದು ಯಾರ ಲಾರಿ ಎಂದು ಕೇಳಿದಾಗ, ಆತ ಸೀಜ್ ಆದ ಲಾರಿ ಎಂದು ತಿಳಿಸಿದ. ಸದರಿ ಲಾರಿ ಕೆಂಪು ಬಣ್ಣದಾಗಿದ್ದು, ಅದರ ಮೇಲೆ ಅಶೋಕ್ ಎಂಬ ಸ್ಟಿಕ್ಕರ್ ಅಂಟಿಸಿತ್ತು. ಸದರಿ ಲಾರಿಯ ದಾಖಲೆಗಳು ಎಲ್ಲಿವೆ ಎಂದು ಕೇಳಿದಾಗ, ಆತ ಕಛೇರಿಯಲ್ಲಿ ಇದೆ ಎಂದು ಹೇಳಿ, ಗೇಟ್ ಬಳಿ ಇದ್ದ ಸದರಿ ಕಛೇರಿಗೆ ಕರೆದುಕೊಂಡು ಹೋಗಿರುತ್ತಾನೆ.

10. ಸದರಿ ಕಛೇರಿಯಲ್ಲಿ ಒಂದು ಟೇಬಲ್, ಎರಡು ಚೇರು, ಒಂದು ಬೀರು ಮತ್ತು ಒಂದು ಕಂಪ್ಯೂಟರ್ ಇತ್ತು. ಆಗ ಪುನೀತ್‌ನನ್ನು ತನಿಖಾಧಿಕಾರಿಯವರು ಸದರಿ ಲಾರಿಯ ದಾಖಲೆಗಳನ್ನು ತೋರಿಸಲು ಕೇಳಿದಾಗ, ಅವು ಕಛೇರಿಯ ಬೀರುವಿನಲ್ಲಿ ಇದ್ದು ಅದರ ಬೀಗ ನಯನ್ ಕುಮಾರ್ ಎಂಬುವವರ ಬಳಿ ಇದೆ ಎಂದು ಹೇಳಿದನು. ನಂತರ ನಯನ್ ಕುಮಾರ್ ಸದರಿ ಬೀರುವನ್ನು ತೆಗೆದು ಒಂದು ಲೆಡ್ಜರ್ ಬುಕ್‌ನ್ನು ತೆಗೆದುಕೊಟ್ಟಿದ್ದರು. ಆಗ ತನಿಖಾದಿಧಕಾರಿಯವರು ನಯನ್ ಕುಮಾರ್ ರವರಿಗೆ ಸದರಿ ಲಾರಿ ಸೀಜ್ ಆದ ಬಗ್ಗೆ ಎಲ್ಲಿ ಬರೆದಿದೆ ಎಂದು ಕೇಳಿದಾಗ, ಸದರಿ ಲೆಡ್ಜರ್ ನ Sl.No.154 ನ್ನು ತೆಗೆದು ತೋರಿಸಿದರು. ಸದರಿ ಲೆಡ್ಜರ್ ನ್ನು ಯಾರು ಬರೆದಿದ್ದಾರೆ ಎಂದು ಕೇಳಿದಾಗ ಬಸವರಾಜು ಎಂಬುವವರು ಬರೆದಿದ್ದಾರೆ ಎಂದು ನಯನ್ ಕುಮಾರ್ ತಿಳಿಸಿದರು. ಆಗ ತನಿಖಾಧಿಕಾರಿಗಳು ತನಿಖೆಗಾಗಿ ಸದರಿ ಲೆಡ್ಜರ್ ನ್ನು ಅಮಾನತ್ತುಪಡಿಸಿಕೊಳ್ಳಬೇಕು

ಎಂದು ನಯನ್ ಕುಮಾರ್ ಮತ್ತು ನಮಗೂ ತಿಳಿಸಿದರು. ನಂತರ ತನಿಖಾಧಿಕಾರಿಗಳು ಒಂದು ಗ್ರೀನ್ ಕಲರ್ ಎನ್ವಲಪ್‌ನಲ್ಲಿ ಸದರಿ ಲೆಡ್ಜರ್ ನ್ನು ಹಾಕಿ ಸೀಲ್ ಮಾಡಿ ಅದರ ಮೇಲೆ ನಮ್ಮ ಸಹಿಗಳನ್ನು ಪಡೆದುಕೊಂಡರು.

11. ಸದರಿ ಮಹಜರ್ ನ್ನು ನೋಡಿದರೆ ಗುರತಿಸುತ್ತೇನೆ. ಸಾಕ್ಷಿಗೆ ಈಗ ದಿಃ21.06.2024 ರಂದು ಮಾಡಿದ ಮಹಜರ್ ನ್ನು ತೋರಿಸಿದಾಗ, ಸಾಕ್ಷಿ ಪ್ರತಿ ಹಾಳೆಯ ಮೊದಲನೇ ಪುಟದಲ್ಲಿ ಇರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರ್ ನ್ನು ಈಗ **ನಿ.ಪಿ.86** ಎಂದು, ಅದರಲ್ಲಿ ಇರುವ ಕೊನೆಯ ಪುಟದಲ್ಲಿ ಇರುವ ಈ ಸಾಕ್ಷಿಯ ಸಹಿಯನ್ನು **ನಿ.ಪಿ.86(ಎ)** ಎಂದು ಗುರುತಿಸಲಾಯಿತು.

12. ಸದರಿ ಸ್ಥಳದಲ್ಲಿ ರಂಗೋಲಿ ಹಾಕಿದ್ದ ಜಾಗದಲ್ಲಿ ತನಿಖಾಧಿಕಾರಿಯವರು ಎರಡು ಫೋಟೋಗಳನ್ನು ತೆಗೆದಿದ್ದರು. ಸಾಕ್ಷಿಗೆ ಈಗ ಎರಡು ಫೋಟೋಗಳನ್ನು ತೋರಿಸಿದಾಗ, ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

***(**ಈ ಹಂತದಲ್ಲಿ ಆರೋಪಿಗಳ ಪರ ವಕೀಲರು ಸದರಿ ಫೋಟೋಗಳನ್ನು ಸಂಬಂಧಿಸಿದ ಸರ್ಟಿಫಿಕೇಟ್ ಕಲಂ ***65*** ಬಿ ರ ಅಡಿಯಲ್ಲಿ ಹಾಜರುಪಡಿಸದೇ ಇರುವ ಕಾರಣ ಅವರ ತಕರಾರಿಗೆ ಒಳಪಟ್ಟು ಸದರಿ ಫೋಟೋಗಳನ್ನು ಗುರುತಿಸಬಹುದು ಎಂದು ಹೇಳಿರುತ್ತಾರೆ***.)***

ಮಾನ್ಯ ವಿಶೇಷ ಅಭಿಯೋನಾಧಿಕಾರಿಗಳು ಈ ಪ್ರಕರಣದಲ್ಲಿ ಈ ಫೋಟೋಗಳನ್ನು ತೆಗೆದ ವ್ಯಕ್ತಿಯೇ ಸರ್ಟಿಫಿಕೇಟ್ ಕಲಂ ***65*** ಬಿ ರ ಅಡಿಯಲ್ಲಿ ಸಲ್ಲಿಸಿದ್ದು ಅದನ್ನು ಮುಂದುವರೆದ ವಿಚಾರಣೆ ಹಂತದಲ್ಲಿ ಗುರುತಿಸಲಾಗುವುದು

ಎಂದು ತಿಳಿಸಿರುತ್ತಾರೆ.

13. ಸದರಿ ಎರಡು ಫೊಟೋಗಳನ್ನು ಆರೋಪಿಗಳ ಪರ ವಕೀಲರ ತಕರಾರಿಗೆ ಒಳಪಟ್ಟು **ನಿ.ಪಿ.87 ಮತ್ತು ನಿ.ಪಿ.88** ಎಂದು ಗುರುತಿಸಲಾಯಿತು. ಸದರಿ ಫೊಟೋಗಳಲ್ಲಿ ಯಾರ್ಯಾರು ಇದ್ದಾರೆ ಎಂದು ಗುರುತಿಸಲು ಆಗುತ್ತದೆಯೇ ಎಂದು ಕೇಳಿದ್ದಕ್ಕೆ, ಸಾಕ್ಷಿ ಸದರಿ ಫೊಟೋದಲ್ಲಿ ಮೊದಲನೆಯದಾಗಿ ಕಾಣುವ ವ್ಯಕ್ತಿ ತಾನು ಆಗಿದ್ದು, ನನ್ನ ಪಕ್ಕದಲ್ಲಿ ಇರುವ ವ್ಯಕ್ತಿ ನನ್ನ ಸಹೊದ್ಯೋಗಿ ಸುರೇಶ್(ಚಾ.ಸಾ.42) ಆಗಿದ್ದು, ನಂತರ ಅವರ ಪಕ್ಕದಲ್ಲಿ ತನಿಖಾಧಿಕಾರಿ ಗಿರೀಶ್ ನಾಯಕ್ ಹಾಗೂ ಅವರ ಪಕ್ಕದಲ್ಲಿ ಇರುವ ವ್ಯಕ್ತಿ ಪುನೀತ್ ಆಗಿದ್ದು, ಆತನ ಪಕ್ಕದಲ್ಲಿ ತನಿಖಾಧಿಕಾರಿಯ ಸಹಾಯಕ ಸಿಬ್ಬಂದಿಯವರಾಗಿದ್ದು ಅವರು ಲ್ಯಾಪ್‌ಟಾಪ್‌ನಲ್ಲಿ ಟೈಪ್ ಮಾಡಿಕೊಳ್ಳುತ್ತಿದ್ದರು ಎನ್ನುತ್ತಾರೆ.

14. ಆ ದಿನ ನಮ್ಮ ಸಮಕ್ಷಮ ತನಿಖಾಧಿಕಾರಿಗಳು ಜಪ್ತಿ ಮಾಡಿದ ಎರಡು ಲೆಡ್ಜರ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ ಎರಡು ಲೆಡ್ಜರ್ ಗಳನ್ನು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿದ್ದು ಅವುಗಳಲ್ಲಿ ಒಂದು ಲೆಡ್ಜರ್ ನ Sl.No.154 ನ್ನು ನಮಗೆ ತೋರಿಸಿದ್ದರು. ಸಾಕ್ಷಿಗೆ ಈಗ ಲೆಡ್ಜರ್ ತೋರಿಸಿದಾಗ ಅದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಲೆಡ್ಜರ್ ನ್ನು ಈಗ **ನಿ.ಪಿ.89** ಎಂದು ಗುರುತಿಸಲಾಯಿತು. ಸಾಕ್ಷಿ ಸದರಿ ಲೆಡ್ಜರ್ ನಲ್ಲಿ ಇರುವ Sl.No.154 ನ್ನು ನೋಡಿ ಇದೇ ಎಂಟ್ರಿಯನ್ನು ಆ ದಿನ ನಯನ್ ಕುಮಾರ್ ತೋರಿಸಿದರು ಎಂದು ಹೇಳುತ್ತಾರೆ. ಸದರಿ ಲೆಡ್ಜರ್ ನ Sl.No.154 ನ್ನು **ನಿ.ಪಿ.89(ಎ)** ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ಮಹಜರ್ ನ್ನು ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿ ಪ್ರಿಂಟ್ ತೆಗೆದು

ನಮಗೆ ಓದಿ ಹೇಳಿ ನಮ್ಮ ಸಹಿಗಳನ್ನು ಪಡೆದಿರುತ್ತಾರೆ.

15. ಇದಾದ ನಂತರ ದರ್ಶನ್ ಮತ್ತು ವಿನಯ್ ಜಯಣ್ಣರವರ ಮನೆಗೆ ಹೋದ ಬಗ್ಗೆ ನನಗೆ ಮಾಹಿತಿ ಇದ್ದು, ಅವರ ಮನೆಗೆ ಹೋಗಿ ಸಿಸಿ ಟಿವಿ ಕ್ಯಾಮರಾ ಪರಿಶೀಲನೆ ಮಾಡಬೇಕು ಹಾಗೂ ಡಿವಿಆರ್ ನ್ನು ಜಪ್ತಿ ಮಾಡಬೇಕು ಎಂದು, ಅಲ್ಲಿಯೂ ಕೂಡ ಮಹಜರ್ ಗೆ ಸಹಕರಿಸಬೇಕು ಎಂದು ತನಿಖಾಧಿಕಾರಿಗಳು ಕೋರಿಕೊಂಡಿದ್ದರಿಂದ, ನಾವು ಅವರೊಂದಿಗೆ ಹೋಗಿರುತ್ತೇವೆ. ಅದರಂತೆ ನಾನು, ಸುರೇಶ್(ಚಾ.ಸಾ.42), ತನಿಖಾಧಿಕಾರಿಗಳಾದ ಗಿರೀಶ್ ನಾಯ್ಕ, ಅವರೊಂದಿಗೆ ಬೆರಳಚ್ಚು ಮಾಡುತ್ತಿದ್ದ ಸಿಬ್ಬಂದಿ ಹಾಗೂ ಕಾರು ಚಾಲಕನೊಂದಿಗೆ ಜಯಣ್ಣರವರ ಮನೆ ಕಡೆ ಹೋಗಿರುತ್ತೇವೆ.

16. ನಾವು ಜಯಣ್ಣರವರ ಮನೆ ಹತ್ತಿರ ಹೋದಾಗ, ಜಯಣ್ಣರವರು ಮನೆಯಲ್ಲಿ ಇದ್ದು, ಏನು ವಿಷಯ ಎಂದು ತನಿಖಾಧಿಕಾರಿಗೆ ಕೇಳಿದಾಗ, ಸಿಸಿಟಿವಿ ಪರಿಶೀಲನೆಗಾಗಿ ಬಂದಿರುವುದಾಗಿ ತಿಳಿಸಿದರು. ಅದಕ್ಕೆ ಜಯಣ್ಣ ನಮ್ಮನ್ನು ಎಲ್ಲಾ ಅವರ ಮನೆಯ ನೆಲಮಹಡಿಯಲ್ಲಿ ಇರುವ ಒಂದು ರೂಂಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಒಂದು ಕಂಪ್ಯೂಟರ್ ಸ್ಕ್ರೀನ್ ಇದ್ದು, ಆದರೆ ಅದರ ಡಿಸ್‌ಪ್ಲೇ ಬ್ಲ್ಯಾಂಕ್ ಇತ್ತು. ಆ ಸ್ಥಳದಲ್ಲಿ ಒಂದು ಡಿವಿಆರ್ ಇದ್ದು ಅದನ್ನು ಜಯಣ್ಣರವರು ತೋರಿಸಿದ್ದು, ತನಿಖಾಧಿಕಾರಿಗಳು ಸದರಿ ಡಿವಿಆರ್ ನ್ನು ತಮ್ಮ ವಶಕ್ಕೆ ಪಡೆದುಕೊಂಡರು. ಆ ಸಮಯದಲ್ಲಿ ನಮ್ಮ ಫೋಟೋವನ್ನು ಸಹ ತೆಗೆದರು. ನಂತರ ಸದರಿ ಡಿವಿಆರ್ ನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ, ಜಪ್ತಿ ಮಾಡಿ ನಮ್ಮ ಸಹಿಗಳನ್ನು ಪಡೆದುಕೊಂಡರು. ಆ ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿ ಲ್ಯಾಪ್‌ಟಾಪ್‌ನಲ್ಲಿ ಟೈಪ್ ಮಾಡಿ,

ಪ್ರಿಂಟ್ ತೆಗೆದು ನಮಗೆ ಓದಲು ಹೇಳಿ ಸಹಿ ಮಾಡಲು ತಿಳಿಸಿದ್ದು, ಅದರಂತೆ ನಾವು ಓದಿ ನಮ್ಮ ಸಹಿಗಳನ್ನು ಮಾಡಿರುತ್ತೇವೆ.

17. ಸಾಕ್ಷಿಗೆ ಈಗ ದಿಃ21.06.2024 ರಂದು ಮಾಡಿದ ಇನ್ನೊಂದು ಮಹಜರ್ ನ್ನು ತೋರಿಸಿದಾಗ, ಸಾಕ್ಷಿ ಪ್ರತಿ ಹಾಳೆಯ ಮೊದಲನೇ ಪುಟದಲ್ಲಿ ಇರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರ್ ನ್ನು ಈಗ **ನಿ.ಪಿ.90** ಎಂದು, ಅದರಲ್ಲಿ ಇರುವ ಕೊನೆಯ ಪುಟದಲ್ಲಿ ಇರುವ ಈ ಸಾಕ್ಷಿಯ ಸಹಿಯನ್ನು **ನಿ.ಪಿ.90(ಎ)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ಫೋಟೋವನ್ನು ತೋರಿಸಿದಾಗ, ಸಾಕ್ಷಿ ಅದನ್ನು ನೋಡಿ ಸದರಿ ಫೋಟೋದಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

*(*ಈ ಹಂತದಲ್ಲಿ ಆರೋಪಿಗಳ ಪರ ವಕೀಲರು ಸದರಿ ಫೋಟೋಗೆ ಸಂಬಂದಿಸಿದ ಸರ್ಟಿಫಿಕೇಟ್ ಕಲಂ ***65*** ಬಿ ರ ಅಡಿಯಲ್ಲಿ ಹಾಜರುಪಡಿಸದೇ ಇರುವ ಕಾರಣ ಅವರ ತಕರಾರಿಗೆ ಒಳಪಟ್ಟು ಸದರಿ ಫೋಟೋವನ್ನು ಗುರುತಿಸಬಹುದು ಎಂದು ಹೇಳಿರುತ್ತಾರೆ.*)*

ಮಾನ್ಯ ವಿಶೇಷ ಅಭಿಯೋನಾಧಿಕಾರಿಗಳು ಈ ಪ್ರಕರಣದಲ್ಲಿ ಈ ಫೋಟೋವನ್ನು ತೆಗೆದ ವ್ಯಕ್ತಿಯೇ ಸರ್ಟಿಫಿಕೇಟ್ ಕಲಂ ***65*** ಬಿ ರ ಅಡಿಯಲ್ಲಿ ಸಲ್ಲಿಸಿದ್ದು ಅದನ್ನು ಮುಂದುವರೆದ ವಿಚಾರಣೆ ಹಂತದಲ್ಲಿ ಗುರುತಿಸಲಾಗುವುದು ಎಂದು ತಿಳಿಸಿರುತ್ತಾರೆ.

18. ಸದರಿ ಫೋಟೋವನ್ನು ಆರೋಪಿಗಳ ಪರ ತಕರಾರಿಗೆ ಒಳಪಟ್ಟು ನಿ.ಪಿ.91 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ಯಾರ್ಯಾರು ಇದ್ದಾರೆ ಎಂದು ಗುರುತಿಸಲು ಆಗುತ್ತದೆಯೇ ಎಂದು ಕೇಳಿದ್ದಕ್ಕೆ, ಸಾಕ್ಷಿ ಸದರಿ

ಫೊಟೋದಲ್ಲಿ ಮೊದಲನೆಯದಾಗಿ ಕಾಣುವ ವ್ಯಕ್ತಿ ತನಿಖಾಧಿಕಾರಿ ಗಿರೀಶ್ ನಾಯ್ಕು, ಅವರ ಪಕ್ಕದಲ್ಲಿ ತಾವು ಇರುವುದಾಗಿ, ಹಾಗೂ ತಮ್ಮ ಪಕ್ಕದಲ್ಲಿ ಇರುವ ವ್ಯಕ್ತಿ ತಮ್ಮ ಸಹೊದ್ಯೋಗಿ ಸುರೇಶ್(ಚಾ.ಸಾ.42) ಆಗಿದ್ದು, ಅವರ ಪಕ್ಕದಲ್ಲಿ ಇರುವ ವ್ಯಕ್ತಿ ಜಯಣ್ಣ ಎಂದು ಗುರುತಿಸಿರುತ್ತಾರೆ. ಜಯಣ್ಣರವರ ಪಕ್ಕದಲ್ಲಿ ತನಿಖಾಧಿಕಾರಿಯ ಸಹಾಯಕರಾಗಿದ್ದು ಅವರು ಲ್ಯಾಪ್‌ಟಾಪ್‌ನಲ್ಲಿ ಟೈಪ್ ಮಾಡಿಕೊಳ್ಳುತ್ತಿದ್ದರು ಎನ್ನುತ್ತಾರೆ.

19. ಜಪ್ತಿ ಮಾಡಿಕೊಂಡ ಡಿವಿಆರ್ ನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಪಿ.ಎಫ್. ನಂ.143/2024 ರಲ್ಲಿನ ಸೀಲಿನಿಂದ ಕೂಡಿದ ವಸ್ತುವನ್ನು ಹಾಜರುಪಡಿಸಿದ್ದು ಅದನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗಳ ಪರ ವಕೀಲರ ಸಮಕ್ಷಮ ತೆಗೆದು ಸಾಕ್ಷಿಗೆ ತೋರಿಸಿದಾಗ, ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಡಿವಿಆರ್ ನ್ನು **ಎಂ.ಓ.50** ಎಂದು, ಸದರಿ ಸೀಲ್ಡ ಕವರ್ ಮೇಲೆ ಅಂಟಿಸಿರುವ ಒಂದು ಚೀಟಿಯ ಮೇಲೆ ಇರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು **ಎಂ.ಓ.50(ಎ)** ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ನ್ಯಾಯಾಲಯದ ಮೊದಲನೆ ಸೆಷನ್ ಮುಕ್ತಾಯವಾದ ಕಾರಣ, ಮುಂದುವರೆದ ಮುಖ್ಯ ವಿಚಾರಣೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**

**<u>ದಿನಾಂಕಃ15.06.2026 ರಂದು ಮಧ್ಯಾಹ್ನ 4.00 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**
**<u>ಪಾಟಿಸವಾಲು ಆರೋಪಿಗಳ ಪರ ವಕೀಲರಿಂದಃ</u>**

ಆರೋಪಿಗಳ ಪರ ವಕೀಲರು ಹಾಜರು ಇದ್ದು ಸಮಯ ಕೋರುತ್ತಾರೆ. ಆದರೆ ಯಾವುದೇ ಸಕಾರಣ ನೀಡಿರುವುದಿಲ್ಲ.

Today, the prosecution has completed the chief examination of PW13. After completion of chief of examination of PW13, Ld. Counsel for A2,11 & 12 seeking deferring the cross examination on the main ground that, after examination of CW91 and CW42 they will cross examine PW13.

On going through the decisions reported in ILR 2008 KAR 4378, in para No.11 & 12 and in the decision 2003(1) AIC 499(cal),held in para No.16,18 & 19, it is very clear that, the cross examination cannot be deferred before the next witness is called for examination.

Relying on the above decisions and as per the directions of Hon'ble Apex court observed in para No.11, the paryer of Ld. Defence counsels for A1 to 17 is rejected.

The Law requires special reasons to be granted for granting time for cross examination. But in this case very casually the defence counsel is seeking time for cross examiantion to a retrd. Bank official.

**As per the directions issued by the Apex court in Crl.A.906/2023 in para No.11**, the prayer of Ld. Counsel for accused rejected and cross examination of witness taken as nil.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**
15.06.2026

**<u>ದಿನಾಂಕಃ10.08.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>**
**<u>ಮಧ್ಯಂತರ ಆದೇಶದ ಮೇರೆಗೆ ಪಾಟಿಸವಾಲು 2 ನೇ ಆರೋಪಿ ಪರ ಪದಾಂಕಿತ ಹಿರಿಯ ಶ್ರೀ. ಹೆಚ್.ಪಿ ವಕೀಲರಿಂದಃ</u>**

20. ನಾನು ಕೆಲಸ ಮಾಡುತ್ತಿರುವ ಬೆಸ್ಕಾಂ ಕಛೇರಿ ರಾಜರಾಜೇಶ್ವರಿನಗರದ ಐಡಿಯಲ್ ಹೋಮ್ಸ್ ಬಳಿ 3 ನೇ ಕ್ರಾಸ್‌ನಲ್ಲಿ ಇದೆ. ಆ ಸಮಯದಲ್ಲಿ ಅಂದರೆ ದಿಃ21.06.2024 ರಂದು ನಮ್ಮ ಎಇಇ ಯಾರು ಇದ್ದರು ಎಂದರೆ, ಸಾಕ್ಷಿ ಅವರು ಈಗ ವರ್ಗಾವಣೆಯಾಗಿದ್ದು, ಅವರ ಹೆಸರು ಈಗ ನನಗೆ ನೆನಪಿಲ್ಲ ಎನ್ನುತ್ತಾರೆ. ಪೊಲೀಸರು ನಮಗೆ ನೋಟೀಸ್ ಜಾರಿ

ಮಾಡಿದ ದಿನ ನಮ್ಮ ಕಛೇರಿಯಲ್ಲಿ ಒಟ್ಟು 26 ಜನ ಕೆಲಸ ಮಾಡುತ್ತಿದ್ದರು. ಆ 26 ಜನರಲ್ಲಿ ಲಿಪಿಕ ಸಿಬ್ಬಂದಿಗಳು ಮತ್ತು ಮೆನ್ ಸ್ಟಾಫ್ ಸಿಬ್ಬಂದಿಗಳು ಇದ್ದರು. ಆ 26 ಜನರ ಪೈಕಿ ಒಬ್ಬರು ಮಾತ್ರ ಕಛೇರಿಯಲ್ಲಿ ಉಳಿದುಕೊಳ್ಳುತ್ತಾರೆ ಮತ್ತು ಇನ್ನು 25 ಜನ ಹೊರಗಡೆ ಕೆಲಸಕ್ಕೆ ಹೋಗುತ್ತಾರೆ ಎನ್ನುತ್ತಾರೆ. ಹೊರಗಡೆ ಕೆಲಸ ಮಾಡಲು ಹೋಗಿದ್ದರೆ work allocation ಪುಸ್ತಕದಲ್ಲಿ ಬರೆಯುತ್ತಾರೆ. ಕೆಲಸ ಮುಗಿಸಿಕೊಂಡು ಬಂದ ನಂತರ ಆ ಪುಸ್ತಕದಲ್ಲಿ ಬರೆಯಬೇಕು ಎಂದರೆ ಸರಿ.

21. ನಮ್ಮ ಕಛೇರಿಯಿಂದ ಪಟ್ಟಣಗೆರೆ ಶೆಡ್ ಅಂದರೆ ಪಂಚನಾಮೆ ಸ್ಥಳ ಸುಮಾರು 5 ಕೀ.ಮಿ ದೂರದಲ್ಲಿ ಇದೆ ಎಂದರೆ ಸಾಕ್ಷಿ 2.5-3 ಕೀ ಅಂತರದಲ್ಲಿ ಇದೆ ಎನ್ನುತ್ತಾರೆ. ತನಿಖಾಧಿಕಾರಿಗಳು ನಮ್ಮ ಕಛೇರಿಯ ಎಇಇ ರವರಿಗೆ ನೀಡಿದ ಪತ್ರವನ್ನು ನಾನು ನೋಡಿರುತ್ತೇನೆ. ಸಾಕ್ಷಿ ಮುಂದುವರೆದು ನಾನು ಆ ಪತ್ರ ನೋಡಿಲ್ಲ ಎನ್ನುತ್ತಾರೆ. ಪೊಲೀಸರು ನೇರವಾಗಿ ನಮ್ಮ ಕಛೇರಿಗೆ ಬಂದು ನನಗೆ ನೋಟೀಸ್ ಜಾರಿ ಮಾಡಿರುವುದಿಲ್ಲ. ನಮ್ಮ ಎಇಇರವರು ನಮಗೆ ಆದೇಶ ಪತ್ರವನ್ನು ನೀಡಿರುತ್ತಾರೆ. ಸದರಿ ಆದೇಶ ಪತ್ರ ಈಗ ನನ್ನ ಬಳಿ ಇಲ್ಲ, ಅದನ್ನು ನಮ್ಮ ಮನೆಯಲ್ಲಿ ಇಟ್ಟಿರುತ್ತೇನೆ. ಸದರಿ ಆದೇಶ ಪತ್ರದ ಮೇಲೆ ನೀವು ಸ್ವೀಕೃತಿ ದಿನಾಂಕ ಮತ್ತು ಸಮಯ ಬರೆದಿದ್ದೀರಾ ಎಂದರೆ, ಸಾಕ್ಷಿ ದಿನಾಂಕ ಬರೆದಿದ್ದೇನೆ, ಆದರೆ ಸಮಯ ಬರೆದಿಲ್ಲ ಎನ್ನುತ್ತಾರೆ.

22. ನಮಗೆ ಮೇಲಾಧಿಕಾರಿಗಳು ಆದೇಶ ನೀಡಿದ ನಂತರ ನಾವು

ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ನಮಗೆ ಜಾರಿ ಮಾಡಿದ ನೋಟೀಸ್‌ನಲ್ಲಿ ಪೊಲೀಸರು ಎಲ್ಲಿಗೆ ಬರಬೇಕು ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ನಮ್ಮನ್ನು ಕರೆದುಕೊಂಡು ಹೋಗಲು ಪೊಲೀಸರು ನಮ್ಮ ಕಛೇರಿಗೆ ಬಂದಿದ್ದರು. ನಮ್ಮ ಕಛೇರಿಯಿಂದ ನಾವು ಪೊಲೀಸ್ ವಾಹನದಲ್ಲಿ ಹೋಗಿರುತ್ತೇವೆ.

23. ನಾವು ಪಟ್ಟಣಗೆರೆ ಶೆಡ್‌ಗೆ ಹೋಗುವಷ್ಟರಲ್ಲಿ ಪೊಲೀಸರು ಜಮಾಯಿಸಿದ್ದರು ಎಂದರೆ ಸರಿಯಲ್ಲ. ನಾವು ಶೆಡ್ ಬಳಿ ಹೋದಾಗ, ತನಿಖಾಧಿಕಾರಿ ಗಿರೀಶ್ ನಾಯ್ಕರವರು ಶೆಡ್ ಒಳಗಡೆ ಇದ್ದರು ಎಂದರೆ ಸರಿ. ನಾವು ಸದರಿ ಶೆಡ್‌ಗೆ ಹೋದಾಗ ಅಲ್ಲಿ ಇಬ್ಬರು ಪೊಲೀಸರು ಇದ್ದರು. ಸದರಿ ಗಿರೀಶ್ ನಾಯ್ಕರವರು ನಮ್ಮನ್ನು ಬರಮಾಡಿಕೊಂಡಿದ್ದರು. ಸದರಿ ಗಿರೀಶ್ ನಾಯ್ಕರವರು ಸಮವಸ್ತ್ರದಲ್ಲಿ ಇದ್ದರು.

24. ನಾವು ಸ್ಥಳಕ್ಕೆ ಹೋದಾಗ, ನಾವು ಕಛೇರಿಯಿಂದ ಹೋದವರು ನಾಲ್ಕು ಜನ ಮತ್ತು ಇಬ್ಬರು ಪೊಲೀಸರು ಇದ್ದರು. ನಾವು ಸದರಿ ಸ್ಥಳಕ್ಕೆ ಹೋದಾಗ ಅಕ್ಕಪಕ್ಕದಲ್ಲಿ ಮೂರು ದಿಕ್ಕಿನಲ್ಲೂ ವಾಸದ ಮನೆಗಳು ಇವೆ ಎಂದರೆ, ಸಾಕ್ಷಿ ಇಲ್ಲ ಎನ್ನುತ್ತಾರೆ. ಈ ಶೆಡ್‌ನ್ನು ಬಿಟ್ಟು 50 ಅಡಿ ದೂರದಲ್ಲಿ ವಾಸದ ಮನೆಗಳು ಇವೆ ಎಂದರೆ ಸರಿ. ಸದರಿ ಮನೆಗಳ ಹತ್ತಿರ ಓಡಾಡುವ ರಸ್ತೆ ಇದೆ

ಎಂದರೆ, ಸಾಕ್ಷಿ ರಸ್ತೆ ಇದೆ, ಟಾರ್ ರಸ್ತೆ ಇಲ್ಲ ಎನ್ನುತ್ತಾರೆ. ಅಲ್ಲಿ ವಾಹನಗಳು ಓಡಾಡುತ್ತವೆ ಎಂದರೆ ಸರಿ. ಸದರಿ ಶೆಡ್‌ನಿಂದ 100-150 ಅಡಿ ದೂರದಲ್ಲಿ ಒಂದು ಪೆಟ್ರೋಲ್ ಬಂಕ್ ಇದೆ ಎಂದರೆ ಸರಿ.

25. ನಾವು ಶೆಡ್ ಹತ್ತಿರ ಹೋದಾಗ ಅಲ್ಲಿ ಸಾರ್ವಜನಿಕರು ಸೇರಿರುವುದಿಲ್ಲ. ಪೊಲೀಸರು ನಮ್ಮನ್ನು ಕರೆದಾಗ, ನಮಗೆ ಬರವಣಿಗೆ ಮಾಡಲು ಬರುತ್ತದೆ ಎಂದು ಮನವರಿಕೆ ಮಾಡಿಕೊಟ್ಟಿರುತ್ತೇವೆ. ಅಲ್ಲಿ ನಡೆದ ನಡುವಳಿಕೆಗಳ ಬಗ್ಗೆ ನಾನು ನನ್ನ ಬರವಣಿಗೆಯಲ್ಲಿ ಮಾಡಿಕೊಟ್ಟಿರುವುದಿಲ್ಲ. ಪೊಲೀಸರು ಮಾಡಿಕೊಟ್ಟ

**ಪ್ರಶ್ನೆಃ** ಪೊಲೀಸರು ಮಾಡಿಟ್ಟ ಬರವಣಿಗೆಗೆ ನೀವು ಸಹಿ ಹಾಕಿರುತ್ತೀರಿ ಇದಕ್ಕೆ ನೀವೇನು ಹೇಳುತ್ತೀರೀ?

**ಉತ್ತರಃ** ಅವರು ಯಾರು ಬರೆದಿಲ್ಲ, ಟೈಪ್ ಮಾಡಿದ್ದಕ್ಕೆ ನಾವು ಸಹಿ ಮಾಡಿರುತ್ತೇವೆ.

26. ಪೊಲೀಸರು ನಮ್ಮನ್ನು ನಿಲ್ಲಿಸಿ ಫೊಟೋ ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ನಾನು ಸದರಿ ಶೆಡ್ ಬಳಿ ಹೋಗುವವರೆಗೆ ನಿಮಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ, ಸಾಕ್ಷಿ ನಾವು ಹೋಗುವಾಗ ಒಂದು ಕೊಲೆ ಪ್ರಕರಣಕ್ಕೆ ಪಂಚರಾಗಿ ಬರಬೇಕು ಎಂದು ನಮಗೆ ಮಾಹಿತಿ ನೀಡಿದ್ದರು

ಎನ್ನುತ್ತಾರೆ. ಇಷ್ಟನ್ನು ಬಿಟ್ಟು ನಿಮಗೆ ಈ ಪ್ರಕರಣದ ಬಗ್ಗೆ ಯಾವುದೇ ವೈಯಕ್ತಿಕ ಮಾಹಿತಿ ಇರಲಿಲ್ಲ ಎಂದರೆ ಸರಿ. ನಾವು ಶೆಡ್‌ಗೆ ಹೋಗಿ, ಶೆಡ್‌ನಿಂದ ಹೊರಗಡೆ ಬರುವವರೆಗೆ ನಮ್ಮ ಜೊತೆ ತನಿಖಾಧಿಕಾರಿ ಗಿರೀಶ್ ನಾಯ್ಕ ಇದ್ದರು ಎಂದರೆ ಸರಿ. ನಾವು ಶೆಡ್ ಒಳಗೆ ಹೋಗಿ ನೋಡಿದ ವಿಷಯಗಳನ್ನು, ನಾವು ಪೊಲೀಸರಿಗೆ ಹೇಳಿ ಬರೆಸಿಲ್ಲ ಮತ್ತು ನಾನು ಬರೆದುಕೊಂಡಿಲ್ಲ ಎಂದರೆ ಸರಿ.

27. ನಾವು ಶೆಡ್ ಬಳಿ ಹೋದಾಗ ತನಿಖಾಧಿಕಾರಿಯವರಿಗೆ ಈ ಶೆಡ್ ಬಳಿ ಈ ಮೊದಲು ಎಷ್ಟು ಬಂದು ಹೋಗಿದ್ದೀರಾ ಎಂದು ನಾನು ಕೇಳಿ ತಿಳಿದುಕೊಂಡಿಲ್ಲ. ನನ್ನ ಸಮಕ್ಷಮ ಸದರಿ ಸ್ಥಳದಿಂದ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಒಂದು ಲೆಡ್ಜರ್ ಬುಕ್‌ನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಲೆಡ್ಜರ್ ಬುಕ್ ಸದರಿ ಶೆಡ್‌ಗೆ ವಾಹನಗಳು ಬಂದು ಹೋಗುವ ಬಗ್ಗೆ ನಮೂದು ಮಾಡಿಕೊಳ್ಳುವ ಲೆಡ್ಜರ್ ಆಗಿರುತ್ತದೆ ಎಂದರೆ ಸರಿ.

28. ನಾನು ಸದರಿ ಲೆಡ್ಜರ್ ನ್ನು ನನ್ನ ಕೈಗೆ ಪಡೆದು ಪರಿಶೀಲನೆ ಮಾಡಿ ನೋಡಿರುವುದಿಲ್ಲ. ಸದರಿ ಲೆಡ್ಜರ್ ಗೆ ನನ್ನ ಸಹಿ ಅಥವಾ ಗುರುತನ್ನು ಹಾಕಿರುವುದಿಲ್ಲ. ಈ ಲೆಡ್ಜರ್ ಬಟ್ಟು ಬೇರೆ ಯಾವುದೇ ವಸ್ತುಗಳನ್ನು ಸದರಿ ಸ್ಥಳದಿಂದ ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿ. ಸದರಿ ಶೆಡ್ ಒಳಗಡೆ ನಮ್ಮನ್ನು ಕರೆಸಿ ಪಂಚನಾಮೆಗೆ ಸಹಿ ಮಾಡಿಸಿಕೊಂಡಿದ್ದು ಬಿಟ್ಟು ಮತ್ತು ಲೆಡ್ಜರ್

ನ್ನು ಅಮಾನತ್ತುಪಡಿಸಿಕೊಂಡಿರುವುದನ್ನು ಬಿಟ್ಟು ಬೇರೆ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿ. ದಿಃ25.05.2026 ಮತ್ತು 15.06.2026 ರಂದು ನಾನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಾಗ ನಿಮ್ಮ ಬಳಿ ಸದರಿ ಮಹಜರ್ ನ ಪ್ರತಿ ಇತ್ತಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಈಗಲೂ ಸಹ ಸದರಿ ಮಹಜರ್ ನ ಪ್ರತಿ ನನ್ನ ಬಳಿ ಇರುವುದಿಲ್ಲ.

29. ನಿ.ಪಿ.86 ನ್ನು ನಾನು ಹೇಳಿ ಬರೆಸಿಲ್ಲ ಎಂದರೆ ಸರಿ. ನಮ್ಮ ಸಮಕ್ಷಮ ಪುನೀತ್ ಎಂಬ ವ್ಯಕ್ತಿಗೆ ಏನಾದರು ಹೇಳುವುದಿದ್ದರೆ ಹೇಳು ಎಂದು ಕೇಳಿರುವುದಿಲ್ಲ. ನಾವು ಕೂಡ ಪುನೀತ್ ಗೆ ನೇರವಾಗಿ ಏನು ಘಟನೆ ನಡೆದಿತ್ತು ಎಂದು ನಾನು ಕೇಳಿರುವುದಿಲ್ಲ.

30. ಸಾಕ್ಷಿಗೆ ಈಗ ದಿಃ15.06.2026 ರಂದುಜ ಪ್ಯಾರ ನಂ.7 ಮತ್ತು 8 ರನ್ನು ತೋರಿಸಿ, ಅದರಲ್ಲಿ ಇರುವ ಒಕ್ಕಣೆಗಳನ್ನು ಪೊಲೀಸರು ಹೇಳಿಕೊಟ್ಟಂತೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಹೇಳಿಕೊಟ್ಟಂತೆ ಬಾಯಿಪಾಟ ಮಾಡಿಕೊಂಡು ಬಂದು ನಾನು ಈ ಕೆಳಗಿನಂತೆ; “ಪವನ್, ಪುನೀತ್‌ಗೆ ಕರೆ ಮಾಡಿ ಲೊಕೇಷನ್ ಕಳುಹಿಸಲು ಕೇಳಿದ್ದು, ಆದರೆ ಪುನೀತ್ ತನಗೆ ಲೊಕೇಷನ್ ಕಳುಹಿಸಲು ಬರುವುದಿಲ್ಲ, ಆದರೆ ರಾಜು ಎಂಬುವವರ ಮೊಬೈಲ್‌ನಿಂದ ಲೊಕೇಷನ್ ಕಳುಹಿಸುವುದಾಗಿ ಹೇಳಿದ್ದನು. ಆದಾದ 20 ನಿಮಿಷಗಳ ನಂತರ ಒಂದು ವಾಹನ ಬಂದಿದ್ದು ಅದರಲ್ಲಿ ನಾಲ್ಕು ಜನ ಇದ್ದರು. ಪವನ್ ಮತ್ತೆ ಪುನೀತ್‌ಗೆ ಕರೆ ಮಾಡಿ

ಯಾವುದಾದರ ವಾಹನ ಬಂದಿತ್ತ ಎಂದು ಕೇಳಿದ್ದಕ್ಕೆ ಆಗ ತಾನು ಬಂದಿದೆ ಎಂದು ಹೇಳಿದ್ದೆ. ಅದಾದ ಅರ್ಧಗಂಟೆಗಳ ನಂತರ ಪವನ್, ನಂದೀಶ್ ಮತ್ತು ಇನ್ನೊಬ್ಬ ವ್ಯಕ್ತಿ ಶೆಡ್ಗೆ ಬಂದಿದ್ದು, ನಂತರ ಶೆಡ್‌ಗೆ ಬಂದವರು ಎಲ್ಲಿದ್ದಾನೆ ಎಂದು ಕೇಳಿದಾಗ, ಆ ಮರದ ಬಳಿ ಇದ್ದಾರೆ ಎಂದು ಪುನೀತ್ ತಿಳಿಸಿದ್ದನು. ನಂತರ ವಾಹನದಲ್ಲಿ ಬಂದಿದ್ದವರು ಮತ್ತು ಮೊದಲು ಬಂದಿದ್ದವರು ಸೇರಿ ಒಬ್ಬ ವ್ಯಕ್ತಿಯನ್ನು ಹೊಡೆದಿದ್ದರು. ಆಗ ಪುನೀತ್ ಹೋಗಿ ಸದರಿ ವ್ಯಕ್ತಿಗಳನ್ನು ಏಕೆ ಈ ವ್ಯಕ್ತಿಗೆ ಹೊಡೆಯುತ್ತಿದ್ದೀರ ಎಂದು ಕೇಳಿದ್ದಕ್ಕೆ ಈತನೇ ಪವಿತ್ರಗೌಡರವರಿಗೆ ಅಶ್ಲೀಲವಾದ ಮೆಸೇಜ್ ಕಳುಹಿಸಿದ್ದ ವ್ಯಕ್ತಿಯಾಗಿದ್ದಾನೆ, ಆತನ ಹೆಸರು ರೇಣುಕ ಎಂದು ಹೇಳಿದ್ದನು. ಆನಂತರ ರೇಣುಕಾಸ್ವಾಮಿಯನ್ನು ಹೊಡೆದ ನಂತರ ಆತ ಮಲಗಿಕೊಂಡಿದ್ದಾಗ, ಉಳಿದವರೆಲ್ಲರೂ ಸೇರಿ ಊಟಕ್ಕೆ ಹೋದರು. ನಂತರ ವಿನಯ್ ಎಂಬುವವರು ಪುನೀತ್‌ಗೆ ಕರೆ ಮಾಡಿ ಯಾರಾದರು ವಾಹನದಲ್ಲಿ ಅಲ್ಲಿಗೆ ಬಂದಿದ್ದಾರ ಎಂದು ವಿಚಾರಿಸಿದನು. ಅದಕ್ಕೆ ಪುನೀತ್ ಯಾರೋ ನಾಲ್ಕು ಜನ ವಾಹನದಲ್ಲಿ ಬಂದಿದ್ದಾರೆ, ಅವರು ಒಬ್ಬ ವ್ಯಕ್ತಿಗೆ ಹೊಡೆದು ಮಲಗಿಸಿ ಅವರು ಊಟಕ್ಕೆ ಹೋಗಿದ್ದಾರೆ ಎಂದು ಹೇಳಿದನು. ಯಾವ ವ್ಯಕ್ತಿಗೆ ಹೊಡೆದಿದ್ದಾರೆ, ಆತನ ಫೋಟೋವನ್ನು ಮೊಬೈಲ್‌ನಲ್ಲಿ ತೆಗೆದು ಕಳುಹಿಸಲು ವಿನಯ್ ಕೇಳಿದ್ದನು. ಅದಕ್ಕೆ ಪುನೀತ್ ಆ ವ್ಯಕ್ತಿಯ ಫೋಟೋ ತೆಗೆದು ಕಳುಹಿಸಿರುತ್ತಾನೆ. ಇದಾದ ಸುಮಾರು ಅರ್ಧ ಗಂಟೆ ನಂತರ ಸದರಿ ಸ್ಥಳಕ್ಕೆ ವಿನಯ್, ದರ್ಶನ್, ಪವಿತ್ರಗೌಡ ಮತ್ತು ಪ್ರದೂಷ್ ಒಂದು ಕಾರಿನಲ್ಲಿ ಹಾಗೂ ಇನ್ನೊಂದು ಕಾರಿನಲ್ಲಿ ನಾಗರಾಜ್ ಎಂಬುವವರು ಬಂದಿರುತ್ತಾರೆ. ಅವರೆಲ್ಲರೂ ಸೇರಿ ರೇಣುಕಾಸ್ವಾಮಿಗೆ ಹಲ್ಲೆ ಮಾಡಿ, ಸದರಿ ವ್ಯಕ್ತಿಯನ್ನು ಅಲ್ಲೆ ಬಿಟ್ಟು ಹೋದರು. ಸದರಿ ಸ್ಥಳಕ್ಕೆ ಮೊದಲ ವಾಹನದಲ್ಲಿ ಚಿತ್ರದುರ್ಗದಿಂದ ಬಂದ

ವ್ಯಕ್ತಿಗಳು ದರ್ಶನ್ ಜೊತೆಗೆ ಫೋಟೋ ತೆಗೆಸಿಕೊಳ್ಳಬೇಕು ಎಂದು ಕೇಳಿದ್ದರು, ಅದಕ್ಕೆ ಪುನೀತ್‌ರವರು ಅವರೆಲ್ಲರ ಫೋಟೋಗಳನ್ನು ತೆಗೆದಿರುತ್ತಾನೆ. ನಂತರ ಅವರೆಲ್ಲರೂ ಹೊರಟು ಹೋಗಿರುತ್ತಾರೆ. ನಂತರ ಪುನೀತ್ ಮಹದೇಶ್ವರ ಬೆಟ್ಟಕ್ಕೆ ಹೋಗಿರುತ್ತಾರೆ. ಪುನೀತ್ ಮಹದೇಶ್ವರ ಬೆಟ್ಟದಿಂದ ಕೆಲಸಕ್ಕೆ ಬಂದಾಗ, ವಿನಯ್‌ರವರಿಗೆ ಮೊನ್ನೆ ಮೊಬೈಲ್ನಿಂದ ಕಳುಹಿಸಿದ್ದ ಆ ವ್ಯಕ್ತಿಯ ಫೋಟೋ ಎಲ್ಲಿದೆ ಎಂದು ತೋರಿಸಲು ಕೇಳಿದನು, ಆತನ ತನ್ನ ಮೊಬೈಲ್‌ನಲ್ಲಿ ಇರುವ ಫೋಟೋವನ್ನು ತೋರಿಸಿದಾಗ, ವಿನಯ್ ಸದರಿ ಫೋಟೋವನ್ನು ಡಿಲೀಟ್ ಮಾಡಿರುತ್ತಾರೆ". ಇಷ್ಟನ್ನು ಪುನೀತ್ ಹೇಳಿದ ನಂತರ ಪುನೀತ್‌ಗೆ ಯಾವ ಸ್ಥಳದಲ್ಲಿ ಆ ವ್ಯಕ್ತಿಯನ್ನು ಹೊಡೆದು ಮಲಗಿಸಿದರು ಎಂದು ಪೊಲೀಸರು ಹಾಗೂ ನಾವು ಕೇಳಿದಾಗ, 200 ಮೀಟರ್ ದೂರದಲ್ಲಿ ಒಂದು ಲಾರಿ ಇದೆ, ಅಲ್ಲಿ ಆ ಸ್ಥಳ ಇದೆ ಎಂದು ಹೇಳಿ ಅಲ್ಲಿಗೆ ಕರೆದುಕೊಂಡು ಹೋಗುತ್ತಾನೆ." ಎಂದು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ. ಪುನೀತ್ ಎಂಬ ವ್ಯಕ್ತಿ ನನ್ನ ಮುಂದೆ ಈ ರೀತಿ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

31. ನಾವು ಸದರಿ ಶೆಡ್ಡೆ ಹೋಗುವ ಮೊದಲೇ ಅಲ್ಲಿದ್ದ ಪೊಲೀಸರು ಅಲ್ಲಿ ರಂಗೋಲಿಯನ್ನು ಬಿಡಿಸಿಟ್ಟಿದ್ದರು ಎಂದರೆ, ಸಾಕ್ಷಿ ನಾವು ಹೋದ ಮೇಲೆ ಬಿಡಿಸಿದರು ಎನ್ನುತ್ತಾರೆ. ನಾವು ಹೋದಾಗಿನಿಂದ ಹೊರಗೆ ಬರುವವರೆಗೆ ಅಲ್ಲಿ ತನಿಖಾಧಿಕಾರಿಗಳು ವಿಡಿಯೋಗ್ರಾಫಿ ಮಾಡಿದ ಬಗ್ಗೆ ನನಗೆ ತಿಳಿದಿರುವುದಿಲ್ಲ, ಆದರೆ ಫೋಟೋಗಳನ್ನು ತೆಗೆದಿರುತ್ತಾರೆ. ಪುನೀತ್ ಆ ರೀತಿ ಹೇಳಿರುತ್ತಾನೆ ಎಂದು ತೋರಿಸಲು ಯಾವುದೇ ವಿಡಿಯೋಗ್ರಫಿ ಮಾಡಿಕೊಂಡಿಲ್ಲ ಎಂದರೆ,

ಸಾಕ್ಷಿ ವಿಡಿಯೋಗ್ರಾಫಿ ಮಾಡಿದ ಬಗ್ಗೆ ನನ್ನ ಗಮನಕ್ಕೆ ಬಂದಿರುವುದಿಲ್ಲ ಎನ್ನುತ್ತಾರೆ. ಪುನೀತ್ ಹೇಳಿದ್ದನ್ನು ನಾನು ಬರೆದಿಟ್ಟುಕೊಂಡಿರುವುದಿಲ್ಲ. ಸದರಿ ಸ್ಥಳದಲ್ಲಿ ಪುನೀತ್(ಚಾ.ಸಾ.91) ನಮಗಾಗಲೀ ಅಥವಾ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಪ್ರಶ್ನೆಃ** ಅಮಾನತ್ತುಪಡಿಸಿಕೊಂಡ ರಿಜಿಸ್ಟರ್ ನಲ್ಲಿ ನಿಮ್ಮ ಸಹಿ ಮತ್ತು ಯಾವುದೇ ಗುರುತು ಇರದೇ ಇದ್ದ ಕಾರಣ, ಸದರಿ ರಿಜಿಸ್ಟರ್ ನ್ನು ನಿಮಗೆ ಗುರುತು ಹಿಡಿಯಲು ಆಗುವುದಿಲ್ಲ. ಇದಕ್ಕೆ ನೀವೇನು ಹೇಳುವಿರಿ?

**ಉತ್ತರಃ** ಸಾಕ್ಷಿ ನಾನು ವಾಹನ ಸಂಖ್ಯೆ ಮತ್ತು ಪುಟ ಸಂ.154 ಎಂದು ನಾನು ನೆನಪಿಟ್ಟುಕೊಂಡಿದ್ದರಿಂದ, ನಾನು ಸದರಿ ರಿಜಿಸ್ಟರ್ ನ್ನು ತೋರಿಸಿದರೆ ಗುರುತಿಸಬಲ್ಲೆ ಎನ್ನುತ್ತಾರೆ.

32. ನನಗೆ ವಾಹನ ಸಂಖ್ಯೆ ನೆನಪಿಲ್ಲ. ಸದರಿ ರಿಜಿಸ್ಟರ್ ಬಗೆಗ ಮಾಹಿತಿಯನ್ನು ಪುನೀತ್ ಕೊಟ್ಟಿದ್ದ. ಸದರಿ ರಿಜಿಸ್ಟರ್ ನ್ನು ನಯನ್ ಕುಮಾರ್ ಎಂಬುವವರು ಬರೆದಿರುತ್ತಾರೆ. ಸದರಿ ನಯನ್ ಕುಮಾರ್ ರವರು ಮಹಜರ್ ಗೆ ನನ್ನ ಸಮಕ್ಷಮ ಸಹಿ ಮಾಡಿಲ್ಲ ಎಂದರೆ, ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ಪೊಲೀಸರು ನಮ್ಮನ್ನು ಕರೆದು ಮಹಜರ್ ಗೆ ಸಹಿ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ರಿಜಿಸ್ಟರ್ ನ್ನು ನಾನು ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ.

33. ನಿ.ಪಿ.87 ಮತ್ತು 88 ಫೋಟೋಗಳನ್ನು ಆ ದಿನ ತೆಗೆದಿಲ್ಲ ಎಂದರೆ ಸರಿಯಲ್ಲ. ಸದರಿ ಫೋಟೋಗಳ ಮೇಲೆ ನನ್ನ ಸಹಿ ಇಲ್ಲ ಎಂದರೆ ಸರಿ. ನಿ.ಪಿ.87 ಮತ್ತು 88 ಗಳನ್ನು ಕಾಮಾಕ್ಷಿಪಾಳ್ಯ ಪೊಲೀಸರು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಫೋಟೋಗಳನ್ನು ಆ ದಿನ ಆ ಸ್ಥಳದಲ್ಲಿ ಪ್ರಿಂಟ್ ತೆಗೆದ ಬಗ್ಗೆ ನನಗೆ ನೆನಪಿಲ್ಲ. ಸದರಿ ಫೋಟೋಗಳನ್ನು ನ್ಯಾಯಾಲಯದಲ್ಲಿ ಮೊದಲಬಾರಿಗೆ ನೋಡಿರುತ್ತೇನೆ ಎಂದರೆ ಸರಿ.

34. ಜಯಣ್ಣರವರ ಮನೆಗೆ ಪೊಲೀಸರು ನಮ್ಮನ್ನು ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಜಯಣ್ಣರವರ ಮನೆಗೆ ಹೋದಾಗ, ನಾನು ಅವರನ್ನು ಖುದ್ದಾಗಿ ಮಾತನಾಡಿಸಿರುವುದಿಲ್ಲ. ಡಿವಿಆರ್ ಮೇಲೆ ನಮ್ಮ ಗುರುತನ್ನು ಹಾಕಿಸಿಲ್ಲ ಎಂದರೆ ಸರಿ. ಸದರಿ ಡಿವಿಆರ್ ನಲ್ಲಿ ಏನು ದೃಶ್ಯಾವಳಿಗಳು ಇದ್ದವು ಎಂದು ಪೊಲೀಸರು ನಮ್ಮ ಸಮಕ್ಷಮ ನೋಡಿರುವುದಿಲ್ಲ ಎಂದರೆ ಸರಿ. ಅಲ್ಲಿ ಬರೆದಂತಃ ಮಹಜರ್ ನ್ನು ನಾವು ಹೇಳಿ ಬರೆಸಿಲ್ಲ ಎಂದರೆ ಸರಿ. ಅಲ್ಲಿ ಪೊಲೀಸರು ಬರೆದ ಮಹಜರ್ ಗೆ ನೀವು ಸಹಿ ಮಾಡಿದ್ದೀರಾ ಎಂದರೆ, ಸಾಕ್ಷಿ ಪೊಲೀಸರು ಅಲ್ಲಿ ನಡೆದ ವಿಷಯಗಳಿಗೆ ಪೊಲೀಸರು ಮಹಜರ್ ಬರೆದಾಗ ನಾವು ಸಹಿ ಮಾಡಿದ್ದೇವೆ ಎನ್ನುತ್ತಾರೆ. ಪೊಲೀಸರು ಸದರಿ ಜಯಣ್ಣರವರಿಗೆ ಹಿಂಬರಹ ನೀಡಿದ ಬಗ್ಗೆ ನನಗೆ ನೆನಪಿಲ್ಲ.

35. ನಿ.ಪಿ.91 ಫೋಟೋವನ್ನು ನಾನು ನ್ಯಾಯಾಲಯದಲ್ಲಿ ಮೊದಲಬಾರಿಗೆ ನೋಡಿರುತ್ತೇನೆ ಎಂದರೆ ಸರಿ. ಸದರಿ ನಿ.ಪಿ.91 ರಲ್ಲಿ ಪುನೀತ್ ಇಲ್ಲ ಎಂದರೆ ಸರಿ. ಡಿವಿಆರ್ ಮೇಲೆ ಯಾವುದೇ ಗುರುತು ಇಲ್ಲ ಎಂದರೆ ಸರಿ. ಆ ದಿನ ಜಪ್ತಿ ಮಾಡಿಕೊಂಡ ಡಿವಿಆರ್ ಇದೇ ಎಂದು ಈಗ ಖಚಿತವಾಗಿ ಹೇಳಲು ಆಗುವುದಿಲ್ಲ ಎಂದರೆ, ಸಾಕ್ಷಿ ನಾವು ಯಾವುದೇ ಗುರುತು ಹಾಕಿರುವುದಿಲ್ಲ, ಆದ್ದರಿಂದ ಇದೇ ಆ ಡಿವಿಆರ್ ಎಂದು ಹೇಳಲು ಆಗುವುದಿಲ್ಲ ಎನ್ನುತ್ತಾರೆ.

36. ಪೊಲೀಸರು ಸುಮಾರು ಸ್ಲಿಪ್‌ಗಳ ಮೇಲೆ ನಮ್ಮ ಸಹಿಗಳನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಸರ್ಕಾರಿ ನೌಕರನಾದ ಕಾರಣ, ನಾನು ಪೊಲೀಸರು ಮಾಡಿದ ಪಂಚನಾಮೆಗೆ ನನ್ನ ಸಹಿಗಳನ್ನು ಹಾಕಿಸಿಕೊಂಡಿರುವ ಕಾರಣ, ನಾನು ಸದರಿ ಪಂಚನಾಮೆಗಳ ಅನುಗುಣವಾಗಿ ಸಾಕ್ಷಿ ನುಡಿಯದೇ ಇದ್ದರೇ ನನ್ನ ಸೇವೆಗೆ ತೊಂದರೆಯಾಗುತ್ತದೆ ಎಂದು ನನಗೆ ಮಾಹಿತಿ ಇದೆ ಎಂದರೆ ಸರಿ. ಆದ ಕಾರಣ ನನ್ನ ಕೆಲಸಕ್ಕೆ ತೊಂದರೆಯಾಗುತ್ತದೆ ಎಂದು ಪೊಲೀಸರು ಹೇಳಿಕೊಟ್ಟಂತೆ, ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

37. ಜಯಣ್ಣರವರ ಮನೆಯ ಅಕ್ಕಪಕ್ಕದಲ್ಲಿ ಬೇರೆ ವಾಸದ ಮನೆಗಳು ಇವೆ. ನಾವು ಜಯಣ್ಣರವರ ಮನೆಗೆ ಹೋದಾಗ, ಪೊಲೀಸರು ಅಕ್ಕಪಕ್ಕದ ಮನೆಯವರನ್ನು ಕರೆಸಿರುವುದಿಲ್ಲ. ಶೆಡ್ ಪಕ್ಕದಲ್ಲಿ ಇದ್ದ ಮನೆಯವರನ್ನು ಸಹ

ಪೊಲೀಸರು ಕರೆಸಿರಲಿಲ್ಲ ಎಂದರೆ ಸರಿ. ಪೊಲೀಸರು ಬಲವಂತವಾಗಿ ಬಾಯಿಪಾಟ ಮಾಡಿಸಿ ಹೀಗೆ ಹೇಳಬೇಕು ಎಂದು ಹೇಳಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

**ಪ್ರಶ್ನೆ:** ನೀವು ಸರ್ಕಾರಿ ಕೆಲಸದಲ್ಲಿ ಇದ್ದ ಕಾರಣ, ಪೊಲೀಸರಿಂದ ತಿಳಿದುಕೊಂಡು ಮತ್ತು ಅವರು ಹೇಳಿದಂತೆ ನೀವು ಹೇಳಬೇಕು ಎಂದು ನಿಮ್ಮನ್ನು ಹೆದರಿಸಿ, ಕಟ್ಟಿಹಾಕಿಸಿಕೊಂಡು ನಮ್ಮನ್ನು ಪಂಚರಾಗಿ ಮಾಡಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

**ಉತ್ತರ:** ಇಲ್ಲ.

**<u>ಮಧ್ಯಂತರ ಆದೇಶದ ಮೇರೆಗೆ ಪಾಟೀಸವಾಲು 4, 6 ರಿಂದ 10, 13 ಮತ್ತು 15 ರಿಂದ 17 ನೇ ಆರೋಪಿಗಳ ಪರ ಶ್ರೀ. ಆರ್.ಆರ್ ವಕೀಲರಿಂದ:</u>**

38. ಸಾಮಾನ್ಯವಾಗಿ ಹಲವಾರು ವಿಷಯಗಳಿಗೆ ಸಂಬಂದಿಸಿದಂತೆ ಪೊಲೀಸ್ ಇಲಾಖೆ ಮತ್ತು ವಿದ್ಯುತ್ ಇಲಾಖೆಗಳಿಗೆ ಒಡನಾಟ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಹಲವಾರು ಇಲಾಖೆಯ ಕಾರ್ಯಗಳಿಗೋಸ್ಕರ ನಾವು ಪೊಲೀಸ್ ಠಾಣೆಗೆ ಹೋಗುವುದು ಮತ್ತು ಪೊಲೀಸರು ನಮ್ಮ ಕಛೇರಿಗೆ ಬರುವುದು ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಈ ಒಡನಾಟ ಈ ಎರಡು ಇಲಾಖೆಗಳ ಮಧ್ಯೆ ಇರುವುದರಿಂದ, ಪೊಲೀಸರು ನಮ್ಮ ಇಲಾಖೆಯ

ಸಿಬ್ಬಂದಿಗಳನ್ನು ಪಂಚರಾಗಿ ಮಾಡಿಕೊಳ್ಳುವುದು ಇದೆ ಎಂದರೆ ಸರಿ.

39. ಈ ಪ್ರಕಣಕ್ಕೂ ಮುಂಚೆ ನಾನು ಬೇರೆ ಯಾವುದೇ ಪ್ರಕರಣಕ್ಕೆ ಮಹಜರ್ ಸಾಕ್ಷಿಯಾಗಿರುವುದಿಲ್ಲ. ನಮ್ಮ ಕಛೇರಿಯಿಂದ ಪಟ್ಟಣಗೆರೆ ಶೆಡ್‌ಗೆ ಪೊಲೀಸರು ತಮ್ಮ ಇಲಾಖಾ ವಾಹನದಲ್ಲಿ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ನಮಗೆ ಪರಿಚಯ ಇದ್ದ ಪೊಲೀಸ್ ಸಿಬ್ಬಂದಿಯಾಗಿದ್ದರಿಂದ ಪಂಚರಾಗಿ ಬರಬೇಕು ಎಂದು ಹೇಳಿ ನನ್ನನ್ನು ಕರೆದುಕೊಂಡು ಹೋಗಿದ್ದರು ಎಂದರೆ, ಸಾಕ್ಷಿ ಕಾಮಾಕ್ಷಿಪಾಳ್ಯ ಪೊಲೀಸರ ಜೊತೆಗೆ ಹೋಗಿ ಎಂದು ಹೇಳಿ ನಮ್ಮನ್ನು ಕಳುಹಿಸಿಕೊಟ್ಟಿದ್ದರು ಎನ್ನುತ್ತಾರೆ.

40. ನಾವು ಶೆಡ್ ಗೆ ಹೋಗುವ ದಾರಿಯಲ್ಲಿ ವಾಹನದಲ್ಲಿ ಇರುವಾಗ ಪೊಲೀಸರು ಪಂಚನಾಮೆ ಬಗ್ಗೆ ವಿವರವಾಗಿ ಹೇಳಿದ್ದರು ಎಂದರೆ ಸರಿ. ನಮ್ಮನ್ನು ಕರೆದುಕೊಂಡು ಹೋಗುವಾಗ ಪೊಲೀಸರು ಯಾವ ರೀತಿ ಎರಡು ಪಂಚನಾಮೆಗಳ ಬಗ್ಗೆ ವಿವರಣೆ ನೀಡಿದ್ದರೋ ಅದೇ ರೀತಿ ನಾವು ಪಂಚರಾಗಿ ಸಹಕರಿಸಿದ್ದೇವೆ ಎಂದರೆ ಸರಿಯಲ್ಲ. ಪಟ್ಟಣಗೆರೆ ಪ್ರದೇಶ ಜನನಿಬಿಡ ಪ್ರದೇಶವಾಗಿದ್ದು, ಅಲ್ಲಿ ಸಾವಿರಾರು ಜನ ವಾಸ ಮಾಡುತ್ತಾರೆ ಎಂದರೆ ಸರಿ.

41. ನಾವು ಪಟ್ಟಣಗೆರೆ ಶೆಡ್ ಒಳಗೆ ಹೋದಾಗ, ಪುನೀತ್ (ಚಾ.ಸಾ.91) ನೊಂದಿಗೆ ಇಬ್ಬರು ಪೊಲೀಸರು ಇದ್ದರು. ಪುನೀತ್ ಆ

ಸಮಯದಲ್ಲಿ ಪೊಲೀಸರ ವಶದಲ್ಲಿ ಇದ್ದ ಎಂದರೆ, ಸಾಕ್ಷಿ ಆತ ಪೊಲೀಸರ ಜೊತೆ ಇದ್ದ ಎನ್ನುತ್ತಾರೆ. ನಾವು ಸದರಿ ಸ್ಥಳಕ್ಕೆ ಹೋದಾಗ ಅಲ್ಲಿ ಪೊಲೀಸರು ಮತ್ತು ಪುನೀತ್ ಮಾತನಾಡುತ್ತಿದ್ದರು ಎಂದರೆ, ಸಾಕ್ಷಿ ಅವರಿಬ್ಬರು ಅಲ್ಲಿ ನಿಂತಿದ್ದರು ಎನ್ನುತ್ತಾರೆ.

42. ನಾವು ಮೊದಲು ಒಳಗಡೆ ಹೋದಾಗ, ಪುನೀತ್‌ಗೆ ನೀನು ಸ್ವಯಂ ಪ್ರೇರಿತವಾಗಿ ಈ ರೀತಿ ನುಡಿಯುತ್ತಿದ್ದೀಯಾ ಎಂದು ನಾನು ಕೇಳಿರುವುದಿಲ್ಲ. ಪುನೀತ್ ಗೆ ಪೊಲೀಸರು ತರಬೇತಿ ಕೊಟ್ಟಂತೆ ಆತ ಸ್ಥಳವನ್ನು ತೋರಿಸುತ್ತಾ ಹೋಗಿದ್ದ ಎಂದರೆ ಸರಿಯಲ್ಲ. ನಿ.ಪಿ.86 ಮತ್ತು 90 ಪಂಚನಾಮೆಗಳಿಗೆ ನಾನು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಎರಡು ದಾಖಲೆಗಳನ್ನು ಬೆರಳಚ್ಚು ಮಾಡಿ ಪ್ರಿಂಟ್ ತೆಗೆದಿರುವುದು ಠಾಣೆಯಲ್ಲಿಯೇ ಎಂದರೆ ಸರಿಯಲ್ಲ.

43. ನಿ.ಪಿ.87 ಮತ್ತು 88 ಫೋಟೋಗಳಲ್ಲಿ ಪ್ರಿಂಟಿಂಗ್ ಮಷೀನ್ ಕಂಡುಬರುತ್ತಿಲ್ಲ ಎಂದರೆ ಸರಿ. ಅದೇ ರೀತಿ ನಿ.ಪಿ.91ರ ಫೋಟೋದಲ್ಲಿ ಪ್ರಿಂಟಿಂಗ್ ಮಷೀನ್ ಕಂಡುಬರುತ್ತಿಲ್ಲ ಎಂದರೆ ಸರಿ. ಅದೇ ರೀತಿ ನಿ.ಪಿ.87 ಮತ್ತು 88 ಫೋಟೋಗಳಲ್ಲಿ ವಿದ್ಯುತ್ ಸಂಪರ್ಕ ಹೊಂದಲು ಸ್ವಿಚ್ ಬೋರ್ಡ್ ಕಾಣುತ್ತಿಲ್ಲ ಎಂದರೆ ಸರಿ. ಸ್ಥಳದಲ್ಲಿ ಯಾವುದೇ ಪ್ರಿಂಟರ್ ಇಲ್ಲದ ಕಾರಣ ಫೊಟೋಗಳಲ್ಲಿ ಕಾಣುತ್ತಿಲ್ಲ ಎಂದರೆ, ಸಾಕ್ಷಿ ಫೊಟೋಗಳಲ್ಲಿ ಪ್ರಿಂಟರ್ ಕಾಣುತ್ತಿಲ್ಲ

ಎನ್ನುತ್ತಾರೆ.

44. ಎರಡು ಪಂಚನಾಮೆಗಳು ಮಾಡಿದ ನಂತರ, ನಾವು ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ಪುನೀತ್‌ಗೆ ಪೊಲೀಸರ ನಿರ್ದೇಶನದಂತೆ ಪುನೀತ್, ಆ ಸ್ಥಳದಲ್ಲಿ ಸಾಕ್ಷಿಯಾಗಿ ತೊಡಗಿಸಿಕೊಂಡಿರುತ್ತಾನೆ ಎಂದರೆ ಸಾಕ್ಷಿ ಪುನೀತ್ ಪೊಲೀಸರಿಗೆ ಈ ರೀತಿಯಾಗಿತ್ತು ಎಂದು ತಿಳಿಸುತ್ತಿದ್ದ ಎನ್ನುತ್ತಾರೆ. ಪೊಲೀಸರು ಪುನೀತ್‌ಗೆ ಈ ರೀತಿ ಹೇಳಬೇಕು ಎಂದು ನಿರ್ದೇಶನ ಕೊಟ್ಟಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ.

45. ನಿ.ಪಿ.86 ಮತ್ತು 91 ನಕಲಿ ಪಂಚನಾಮೆಗಳಿಗೆ ನಮಗೆ ಗೊತ್ತಿದ್ದ ಪೊಲೀಸರ ನಿರ್ದೇಶನದಂತೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಇನ್ನು ಉಳಿದ ಪಾಟಿಸವಾಲನ್ನು, 2 ನೇ ಆರೋಪಿ ಪರ ಮಾಡಿದ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**<u>ಮಧ್ಯಂತರ ಆದೇಶದ ಮೆರೆಗೆ ಪಾಟಿಸವಾಲು 5 ನೇ ಆರೋಪಿ ಪರ ಶ್ರೀ.ಕೆ.ಆರ್.ಎಸ್ ವಕೀಲರಿಂದಃ</u>**

46. ದಿಃ21.06.2024 ರಂದು ನಾನು ಯಾವುದೇ ಮಹಜರ್ ಗೆ ಹೋಗಿರುವುದಿಲ್ಲ ಮತ್ತು ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.86 ಮತ್ತು 90 ಕ್ಕೆ ಪಂಚನಾಮೆಗಳಿಗೆ ನಾನು ಠಾಣೆಯಲ್ಲಿ ಸಗಿ ಹಾಕಿರುತೇತೀನೆ ಎಂದರೆ ಸರಿಯಲ್ಲ. ನಾನು ಪೊಲೀಸರು ಹೇಳಿಕೊಟ್ಟಂತೆ ಮೆರೆಗೆ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಇನ್ನು ಉಳಿದ ಪಾಟಿಸವಾಲನ್ನು, 2 ನೇ ಆರೋಪಿ ಪರ ಮಾಡಿದ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**(ಈ ಹಂತದಲ್ಲಿ ಸಮಯ 2.00 ಗಂಟೆಯಾಗಿದ್ದು, ನ್ಯಾಯಾಲಯದ ಮೊದಲನೆ ಹಂತದ ಅವಧಿ ಮುಗಿದ ಕಾರಣ, ಮುಂದುವರೆದ ಪಾಟಿಸವಾಲು ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**

**ದಿಃ10.08.2026 ರಂದು ಮಧ್ಯಾಹ್ನ 3.45 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**
**ಮಧ್ಯಂತರ ಆದೇಶದ ಮೆರೆಗೆ ಪಾಟಿಸವಾಲು 1 ಮತ್ತು 12 ನೇ ಆರೋಪಿಗಳ ಪರ ಶ್ರೀ. ಬಾಲನ್ ವಕೀಲರಿಂದಃ**

47. ನಿ.ಪಿ.89 ರಲ್ಲಿ ಕ್ರಮ ಸಂ.154 ಇದೆಯೇ ಎಂದರೆ, ಸಾಕ್ಷಿ ಇದೆ ಎನ್ನುತ್ತಾರೆ. ಅದರ ಪಕ್ಕದಲ್ಲಿ ದಿಪೀಕಾ ಎಂಬ ಹೆಸರು ಇದೆ ಎಂದರೆ ಸರಿ. ಸದರಿ ಕ್ರಮ ಸಂಖ್ಯೆಯಲ್ಲಿ ವಾಹನ ಸಂಖ್ಯೆ ಕೆಎ-02-ಸಿ-6418 ಬರೆದಿದೆ. ನಿ.ಪಿ.86 ಪಂಚನಾಮೆಯಲ್ಲಿ ಬರೆದಿರುವ ವಾಹನ ಸಂಖ್ಯೆ ಮತ್ತು ನಿ.ಪಿ.89 ರಲ್ಲಿ ಬರೆದಿರುವ ವಾಹನ ಸಂಖ್ಯೆ ಬೇರೆ ಬೇರೆ ಇದೆ ಎಂದರೆ ಸರಿ.

48. ನಿ.ಪಿ.87 ಮತ್ತು 88 ಎರಡು ಫೋಟೋಗಳನ್ನು ಪೆರಿಪ್ಲಸ್ ಸರ್ವೀಸಸ್ ಎಂಬ ಜಾಗದಲ್ಲಿ ತೆಗೆದಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪೆರಿಪ್ಲಸ್ ಎಂಬ ಜಾಗ ನನಗೆ ಗೊತ್ತಿಲ್ಲ ಮತ್ತು ಪಟ್ಟಣಗೆರೆ ಶೆಡ್‌ನಲ್ಲಿ ಸದರಿ ಎರಡು ಫೋಟೋಗಳನ್ನು ತೆಗೆಯಲಾಗಿದೆ ಎನ್ನುತ್ತಾರೆ. ಈ ಎರಡು ಫೋಟೋಗಳಲ್ಲಿ ಪಟ್ಟಣಗೆರೆ ಶೆಡ್ ಎಂದು ಬರೆದಿಲ್ಲ ಮತ್ತು ಒಂದು ಲಾರಿ ಮತ್ತು ಗ್ರೌಂಡ್ ಇದ್ದು ಅದರಲ್ಲಿ ಲೈನ್ ಔಟ್ ಆಗಿದೆ ಎಂದರೆ, ಸಾಕ್ಷಿ ಅದು ಹಾಕಿರುವ ಪಟ್ಟಣಗೆರೆ ಶೆಡ್ ಜಾಗವಾಗಿದ್ದು, ಆ ಫೋಟೋಗಳಲ್ಲಿ ಪಟ್ಟಣಗೆರೆ ಶೆಡ್ ಎಂದು ಬರೆದಿರುವುದು ಕಾಣುತ್ತಿಲ್ಲ ಎನ್ನುತ್ತಾರೆ.

49. ಪೆರಿಪ್ಲಸ್ ಸರ್ವೀಸಸ್ ಮತ್ತು ಇನ್‌ಟ್ಯಾಕ್ಟ ಆಟೋಪಾರ್ಕ ಬೇರೆ

ಬೇರೆ ಜಾಗಗಳು ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.87 ಮತ್ತು 88 ಫೋಟೋಗಳು ಪಟ್ಟಣಗೆರೆಯಲ್ಲಿ ಇರುವ ಪೆರಿಪ್ಲಸ್ ಸರ್ವೀಸಸ್ ಜಾಗ ಎಂದರೆ, ಸಾಕ್ಷಿ ಪೆರಿಪ್ಲಸ್ ಸರ್ವೀಸಸ್ ಜಾಗ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪೆರಿಪ್ಲಸ್ ಸರ್ವೀಸಸ್ ಶೆಡ್ ಮತ್ತು ಪಟ್ಟಣಗೆರೆ ಶೆಡ್‌ಗಳು ಬೇರೆ ಬೇರೆಯಾಗಿದ್ದು, ಅವುಗಳು ಸುಮಾರು 800 ಕೀ.ಮಿ. ಅಂತರದಲ್ಲಿ ಇವೆ ಎಂದರೆ ಸರಿ.

50. ಸಾಮಾನ್ಯವಾಗಿ ಪೆರಿಪ್ಲಸ್ ಸರ್ವೀಸಸ್ ಜಾಗದಲ್ಲಿ ಯಾರಾದರು ಸಾಲವನ್ನು ಮರುಪಾವತಿ ಮಾಡಿರುವುದಿಲ್ಲ, ಅಂತವರ ಆಟೋ, ಲಾರಿ ಮತ್ತು ಬಸ್‌ಗಳನ್ನು ಸೀಜ್ ಮಾಡಿಕೊಂಡು ಬಂದು ಅಲ್ಲಿ ಇಡುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

51. ಸಾಕ್ಷಿಗೆ ಈಗ ನಿ.ಪಿ.86 ನ್ನು ಕೊಟ್ಟು ಪೇಜ್ ನಂ.821 ರ ಕಾಲಂ ನಂ.5 ನ್ನು ಓದಲು ತಿಳಿಸಿದ್ದು, ಅದನ್ನು ಓದಿದಾಗ "Intact Auto Park” ಎಂದು ಬರೆದಿದ್ದು, ನಿ.ಪಿ.89 ಲೆಡ್ಜರ್ ನಲ್ಲಿ "Intact Auto Park” ಎಂದು ಬರೆದಿಲ್ಲ ಎಂದರೆ ಸರಿ. Intact Auto Park ಗೆ ಸಂಬಂದಿಸಿದ್ದ ಯಾವುದೇ ದಾಖಲೆಗಳನ್ನು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸಾಕ್ಷಿ ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ ಎನ್ನುತ್ತಾರೆ.

52. ದಿಃ15.06.2026 ರಂದು ಸಾಕ್ಷಿ ವಿಚಾರಣೆಗೆ ನಾನು ಬಂದಾಗ,

ಅಭಿಯೋಜನೆ ಪರ ವಕೀಲರು ನನಗೆ "Intact Auto Park"ಗೆ ಸಂಬಂದಿಸಿ ಯಾವುದೇ ದಾಖಲೆಗಳನ್ನು ತೋರಿಸಿರುವುದಿಲ್ಲ ಎಂದರೆ, ಸಾಕ್ಷಿ ಒಂದು ಲೆಡ್ಜರ್ ಪುಸ್ತಕವನ್ನು ತೋರಿಸಿರುತ್ತಾರೆ ಎನ್ನುತ್ತಾರೆ. ಸದರಿ ಲೆಡ್ಜರ್ ಪುಸ್ತಕದಲ್ಲಿ "Intact Auto Park" ಎಂದು ಬರೆದಿಲ್ಲ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ.

53. ನಿ.ಪಿ.87 ಮತ್ತು 88 ಎರಡು ಫೋಟೋಗಳನ್ನು ಸಾಕ್ಷಿಗೆ ಈಗ ತೋರಿಸಿ, ಜನರ ಫೋಟೋ ಮತ್ತು ವಾಹನಗಳ ಫೋಟೋಗಳನ್ನು ಸೇರಿಸಿ ಒಂದು ಫೋಟೋ ಮಾಡಲಾಗಿದೆ ಎಂದರೆ, ಸಾಕ್ಷಿ ಮೊದಲು ನಮ್ಮ ಮುಂದೆ ರಂಗೋಲಿ ಹಾಕಿ ಒಂದು ಫೋಟೋ ತೆಗೆದಿದ್ದು, ನಂತರ ನಮ್ಮನ್ನು ನಿಲ್ಲಿಸಿ ಇನ್ನೊಂದು ಫೋಟೋವನ್ನು ತೆಗೆದಿರುತ್ತಾರೆ ಎನ್ನುತ್ತಾರೆ.

54. ದಿಃ21.06.2024 ರಂದು ಬೆಳಗ್ಗೆ ಯಿಂದ ಸಂಜೆವರೆಗೆ ನಮ್ಮ ಕಛೇರಿಯಲ್ಲಿ ಮತ್ತು ಫೀಲ್ಡಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ದಿಃ21.06.2024 ರಂದು ಪುನೀತ್ (ಚಾ.ಸಾ.91) ಮಧ್ಯಾಹ್ನ 3.00 ಗಂಟೆಯಿಂದ ರಾತ್ರಿ 7.30 ಗಂಟೆವರೆಗೆ 12 ನೇ ಎಸಿಎಂಎಂ ನ್ಯಾಯಾಲಯದಲ್ಲಿ ಭಾ.ದಂ.ಪ್ರ.ಸಂ.ಕಲಂ 164 ರಲ್ಲಿ ಹೇಳಿಕೆಯನ್ನು ಕೊಡುತ್ತಿದ್ದ ಎಂದರೆ, ಸಾಕ್ಷಿ ನಿ.ಪಿ.87 ಮತ್ತು 88 ರಂತೆ ಫೋಟೋ ತೆಗೆಯುವಾಗ, ಅದರಲ್ಲಿ ಇರುವ ಒಬ್ಬ ವ್ಯಕ್ತಿ ಪುನೀತ್ ಎಂದು ತಿಳಿಸಿ, ಆತ ನಮ್ಮ

ಜೊತೆಗೆ ಸಂಜೆ 6.00 ರಿಂದ 7.00 ಗಂಟೆವರೆಗೆ ನಮ್ಮ ಜೊತೆ ಇದ್ದ ಎಂದು ನುಡಿಯುತ್ತಾರೆ. ಸದರಿ ಪುನೀತ್ ಆ ದಿನ ಸಂಜೆ 4 ರಿಂದ 5 ಗಂಟೆವರೆಗೆ ಎಲ್ಲಿ ಇದ್ದ ಎಂದು ನನಗೆ ಗೊತ್ತಿಲ್ಲ.

55. ನನ್ನ ಮುಖ್ಯವಿಚಾರಣೆಯ ಪ್ಯಾರ ನಂ.7 ರಿಂದ 9 ರಲ್ಲಿ ಹೇಳಿರುವ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ, ಸಾಕ್ಷಿ ನಾವು ಪಂಚನಾಮೆಗೆ ಹೋದಾಗ ಪುನೀತ್‌ರವರು ಸದರಿ ಮಾಹಿತಿಯನ್ನು ನಮಗೆ ತಿಳಿಸಿದ್ದರು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಪ್ಯಾರ ನಂ.7 ರಲ್ಲಿ ಹೇಳಿದ್ದು ನಮ್ಮ ಮುಂದೆ ಪುನೀತ್ ಹೇಳಿದ್ದು, ಪ್ಯಾರ ನಂ.8 ಮತ್ತು 9 ರಲ್ಲಿ ಹೇಳಿರುವುದು ಆ ದಿನ ನಮ್ಮ ಮುಂದೆ ಆದ ಸಂಗತಿಗಳು ಎನ್ನುತ್ತಾರೆ. ನನ್ನ ಮುಖ್ಯವಿಚಾರಣೆಯ ಪ್ಯಾರ ನಂ.7 ರಿಂದ 9 ರಲ್ಲಿ ಹೇಳಿರುವ ಸಂಗತಿಗಳು ಪೊಲೀಸರು ಹೇಳಿಕೊಟ್ಟ ಕಟ್ಟುಕಥೆಗಳು ಎಂದರೆ ಸುಳ್ಳು.

56. ಆ ದಿನ ನಾನು ಅಲ್ಲಿ ಇರಲಿಲ್ಲ ಮತ್ತು ಪುನೀತ್ ಕೂಡ ಅಲ್ಲಿ ಇರಲಿಲ್ಲ, ಪೊಲೀಸರು ಬರೆದಿದ್ದ ಪಂಚನಾಮೆಗಳಿಗೆ ಸಹಿಗಳು ಹಾಕಿದ್ದೇನೆ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿ ಎಷ್ಟು ಸಹಿಗಳನ್ನು ಹಾಕಿದ್ದೀರೀ ಎಂದರೆ, ಸಾಕ್ಷಿ ನಾನು ಪೊಲೀಸ್ ಠಾಣೆಗೆ ಹೋಗೇ ಇಲ್ಲ ಎನ್ನುತ್ತಾರೆ. ನಾನು ಎಲ್ಲಾ ಸಹಿಗಳನ್ನು ಠಾಣೆಯಲ್ಲಿ ಮಾಡಿದ್ದು, ಈ ಕುರಿತು ನ್ಯಾಯಾಲಯದಲ್ಲಿ

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮಧ್ಯಂತರ ಆದೇಶದ ಮೆರೆಗೆ ಪಾಟಿಸವಾಲು 11 ನೇ ಆರೋಪಿ ಪರ ಶ್ರೀ. ಎಂ.ಜಿ.ಎಸ್ ವಕೀಲರಿಂದಃ**

57. ಉಪವಿಭಾಗದ ಎಇಇ ನಮ್ಮ ಮೇಲಾಧಿಕಾರಿಗಳು ಎಂದರೆ ಸರಿ. ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ಪಂಚನಾಮೆಗೆ ಹೋಗಬೇಕು ಎಂದು ಎಇಇರವರು ತಿಳಿದ್ದರು ಎಂದು ಹೇಳಿದ್ದು, ಅದು ಯಾವ ಸಮಯಕ್ಕೆ ತಿಳಿಸಿದರು ಎಂದರೆ ಸಾಕ್ಷಿ ಸಂಜೆ 5.20 ರಿಂದ 5.30 ರವರೆಗೆ ತಿಳಿಸಿದ್ದರು ಎನ್ನುತ್ತಾರೆ. ಮೇಲಾಧಿಕಾರಿಗಳು ಸೂಚನೆ ಅಥವಾ ಆದೇಶ ನೀಡಿದರು ಅದನ್ನು ನಾನು ಪಾಲಿಸುತ್ತೇನೆ. ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ಹೋಗಬೇಕು ಎಂದು ನಿಮ್ಮ ಮೇಲಾಧಿಕಾರಿಗಳು ಹೇಳಿದ್ದು, ಸದರಿ ಆದೇಶವನ್ನು ಪಾಲನೆ ಮಾಡಿದ್ದೀರಾ ಅಥವಾ ಇಲ್ಲವಾ ಎಂದರೆ, ಸಾಕ್ಷಿ ನಮ್ಮ ಮೇಲಾಧಿಕಾರಿಗಳು ಪೊಲೀಸ್ ಠಾಣೆಯಿಂದ ಕೋರಿಕೆ ಬಂದಿದ್ದು, ಒಂದು ಕೊಲೆ ಪ್ರಕರಣದಲ್ಲಿ ಪಟ್ಟಣಗೆರೆ ಶೆಡ್‌ಗೆ ಪಂಚನಾಮೆಗೆ ಹೋಗಬೇಕು ಎಂದು ತಿಳಿಸಿರುತ್ತಾರೆ ಎನ್ನುತ್ತಾರೆ.

58. ನಾವು ಆ ದಿನ ಕಛೇರಿಯಿಂದ ನೇರವಾಗಿ ಪಟ್ಟಣಗೆರೆ ಶೆಡ್‌ಗೆ ಹೋಗಿದ್ದೆವು. ಕಛೇರಿಯಿಂದ ನಾನು, ನಮ್ಮ ಸಹೋದ್ಯೋಗಿ ಸುರೇಶ್ (ಚಾ.ಸಾ.42) ಮತ್ತು ನಾಲ್ಕು ಜನ ಪೊಲೀಸರು ಸೇರಿ ಸದರಿ ಪಟ್ಟಣಗೆರೆ ಶೆಡ್‌ಗೆ ಹೋಗಿರುತ್ತೇವೆ. ಪಟ್ಟಣಗೆರೆ ಶೆಡ್‌ಗೆ ಹೋಗುವ ಪ್ರವೇಶ ದ್ವಾರದಲ್ಲಿ

ಯಾವುದಾದರೂ ನಾಮಫಲಕ ಇತ್ತೆ ಅಥವಾ ಇಲ್ಲವಾ ಎಂದರೆ, ಸಾಕ್ಷಿ ನಾನು ನೋಡಿದ್ದು ನೆನಪಿಲ್ಲ ಎನ್ನುತ್ತಾರೆ.

59. ಸದರಿ ರಂಗೋಲಿ ಬಿಡಿಸಿದ ಸ್ಥಳದಲ್ಲಿ ತನಿಖಾಧಿಕಾರಿಗಳು ಯಾವುದರಿಂದ ಫೋಟೋವನ್ನು ತೆಗೆದರು ಎಂದರೆ, ಸಾಕ್ಷಿ ಪೊಲೀಸ್ ಸಿಬ್ಬಂದಿ ತಮ್ಮ ಮೊಬೈಲ್ ಫೋನ್ ನಲ್ಲಿ ಎರಡು ಫೋಟೋಗಳನ್ನು ತೆಗೆದಿರುತ್ತಾರೆ ಎನ್ನುತ್ತಾರೆ. ನಿ.ಪಿ.87 ಮತ್ತು 88 ಫೋಟೋಗಳನ್ನು ಪಟ್ಟಣಗೆರೆ ಶೆಡ್‌ಲ್ಲಿ ಬಿಟ್ಟು ಬೇರೆ ಫೋಟೋಗಳನ್ನು ಸದರಿ ಶೆಡ್‌ನಲ್ಲಿ ತೆಗೆದಿದ್ದರೆ ಎಂದರೆ, ಸಾಕ್ಷಿ ಸದರಿ ಶೆಡ್ ನಲ್ಲಿ ನಿ.ಪಿ.87 ಮತ್ತು 88 ಮಾತ್ರ ತೆಗೆದಿದ್ದರು ಎನ್ನುತ್ತಾರೆ.

60. ಸದರಿ ಪಟ್ಟಣಗೆರೆ ಶೆಡ್‌ನ ಪ್ರವೇಶದಲ್ಲಿ ತನಿಖಾಧಿಕಾರಿ ಗಿರೀಶ್ ನಾಯ್ಕರವರು ಇದ್ದರು ಎಂದು ಹೇಳಿದ್ದು, ಆ ಸ್ಥಳದಲ್ಲಿ ಬೇರೆ ಏನೇನು ಕಂಡುಬಂದಿತ್ತು ಎಂದರೆ, ಸಾಕ್ಷಿ ಪ್ರವೇಶ ದ್ವಾರದ ಎಡಭಾಗದಲ್ಲಿ ಒಂದು ಕಛೇರಿ ಇತ್ತು ಮತ್ತು ಸುತ್ತಲೂ ಸೀಜ್ ಆದ ವಾಹನಗಳು ಇದ್ದವು ಎನ್ನುತ್ತಾರೆ. ನಿ.ಪಿ.87 ಮತ್ತು 88 ಫೋಟೋಗಳಲ್ಲಿ, ಆ ಕಛೇರಿ ಕಾಣುತ್ತಿಲ್ಲ ಎಂದರೆ ಸರಿ.

61. ನಿ.ಪಿ.86 ಮತ್ತು 90 ಪಂಚನಾಮೆಗಳಿಗೆ ನಾನು ಠಾಣೆಯಲ್ಲಿ ಸಹಿ ಹಾಕಿದ್ದ ಕಾರಣ, ಅವುಗಳ ಎಲ್ಲಾ ಪುಟಗಳಲ್ಲಿ ನನ್ನ ಸಹಿಗಳು ಇರುವುದಿಲ್ಲ ಎಂದರೆ, ಸಾಕ್ಷಿ ನಾನು ಪೊಲೀಸ್ ಠಾಣೆಯಲ್ಲಿ ಈ ದಾಖಲೆಗಳಿಗೆ ಸಹಿ ಮಾಡಿಲ್ಲ

ಎನ್ನುತ್ತಾರೆ. ಪೊಲೀಸರು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಖಾಲಿ ಪುಟಗಳಿಗೆ ನನ್ನ ಸಹಿಯನ್ನು ಪಡೆದಿದ್ದು ನಂತರ ಅದಕ್ಕೆ ಹೊಂದುವಂತೆ ಬರವಣಿಗೆ ಮಾಡಿಕೊಂಡು ನಿ.ಪಿ.86 ಮತ್ತು 90 ರಂತೆ ಮಹಜರ್ ಗಳನ್ನು ತಯಾರು ಮಾಡಿಕೊಂಡಿರುತ್ತಾರೆ ಎಂದರೆ ಸುಳ್ಳು.

62. ನಿ.ಪಿ.87 ಮತ್ತು 88 ಪಟ್ಟಣಗೆರೆ ಶೆಡ್‌ನಲ್ಲಿ ತೆಗೆದಿರುವ ಫೋಟೋಗಳು ಅಲ್ಲ ಎಂದರೆ ಸುಳ್ಳು. ನಮ್ಮ ಮೇಲಾಧಿಕಾರಿಗಳ ನಿರ್ದೇಶನದಂತೆ ನಾನು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ಹೋಗಿ ಪೊಲೀಸರು ತಯಾರಿಸಿದ್ದ ನಿ.ಪಿ.86 ಮತ್ತು 90 ಪಂಚನಾಮೆಗಳಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸುಳ್ಳು.

63. ಮು.ಮಾ.50 ಡಿವಿಆರ್ ನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುತ್ತೇನೆ ಎಂದರೆ ಸಾಕ್ಷಿ ಜಯಣ್ಣರವರ ಮನೆಯಲ್ಲಿ ನೋಡಿದ್ದೆ ಎನ್ನುತ್ತಾರೆ. ನಿ.ಪಿ.91 ಜಯಣ್ಣರವರ ಮನೆಯಲ್ಲಿ ತೆಗೆದ ಫೋಟೋ ಅಲ್ಲ ಎಂದರೆ ಸುಳ್ಳು. ಸಾಕ್ಷಿ ವಿಚಾರಣೆಗೆ ಬರುವ ಮೊದಲು ಈ ಪ್ರಕರಣದ ದಾಖಲೆಗಳನ್ನು ಓದಿ ತಿಳಿದುಕೊಂಡಿದ್ದೀರಾ ಅಥವಾ ಇಲ್ಲವಾ ಎಂದರೆ, ಸಾಕ್ಷಿ ನಮ್ಮ ಮುಂದೆ ನಡೆದಿರುವ ವಿಷಯಗಳನ್ನು ನಾನು ನ್ಯಾಯಾಲಯದ ಮುಂದೆ ಹೇಳಿರುತ್ತೇನೆ ಎನ್ನುತ್ತಾರೆ. ನಾನು ಈ ಪ್ರಕರಣಕ್ಕೆ ಸಾಕ್ಷಿ ನುಡಿಯಲು ಬರುವ

ಮುನ್ನ ಪೊಲೀಸರಿಂದ ದಾಖಲೆಗಳನ್ನು ಪಡೆದುಕೊಂಡು ಅವುಗಳನ್ನು ಓದಿಕೊಂಡು ನಂತರ ಬಂದು ಇಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಇನ್ನು ಉಳಿದ ಪಾಟಿಸವಾಲನ್ನು, 2 ನೇ ಆರೋಪಿ ಪರ ಮಾಡಿದ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮಧ್ಯಂತರ ಆದೇಶದ ಮೇರೆಗೆ ಪಾಟಿಸವಾಲು 3 ನೇ ಆರೋಪಿ ಪರ ಶ್ರೀ. ಡಿ.ವಿಸ್.ಎಸ್ ವಕೀಲರ ಪರವಾಗಿ ಶ್ರೀ. ಜೆ.ಕೆ.ಪಿ ಶ್ರೀ. ಡಿ.ಎಸ್.ಎಸ್ ವಕೀಲರಿಂದಃ**

3 ನೇ ಆರೋಪಿ ಪರ ವಕೀಲರು ಹಾಜರು ಇದ್ದು, 1,2 ಮತ್ತು 11 ನೇ ಆರೋಪಿಗಳ ಪರ ವಕೀಲರು ಮಾಡಿದ ಪಾಟಿಸವಾಲನ್ನು ತಮ್ಮ ಪರ ಪಾಟಿಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**